ANANTHKUMAR PRATISHTHANA

# ಅನಂತಪಥ

‘ಪಕ್ಷ ಕಟ್ಟುವುದನ್ನು ಕಲಿಸಿದ ಮಾರ್ಗದರ್ಶಕ’ -ಈಶ್ವರಪ್ಪ ಕೆ ಎಸ್

ಪುಟ 5



ಸಂಪುಟ - 3 | ನವೆಂಬರ್ - 2022 | ಸಂಚಿಕೆ - 29

# ನವಕರ್ನಾಟಕದ ಹರಿಕಾರ ಅನಂತಕುಮಾರ್



ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ಮೊದಲಿನ ಹಲವು ದಶಕಗಳ ಕಾಲ ಕೇಂದ್ರ ಮತ್ತು ರಾಜ್ಯಗಳೆರಡರಲ್ಲಿಯೂ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿತ್ತು. 1975ರಲ್ಲಿ ತುರ್ತುಪರಿಸ್ಥಿತಿ ಘೋಷಣೆಯ ನಂತರ ನಡೆದ ಚುನಾವಣೆಯಲ್ಲಿ ಭಾರತದ ಜನತೆ ಕಾಂಗ್ರೆಸ್ ಪಕ್ಷವನ್ನು ಕೇಂದ್ರದಲ್ಲಿ ಅಧಿಕಾರದಿಂದ ಇಳಿಸಿದರೂ ಕರ್ನಾಟಕದಲ್ಲಿ ಮಾತ್ರ ಅದೇ ಪಕ್ಷ ಅಧಿಕಾರಕ್ಕೆ ಬಂದಿತು. ಹೀಗೆ ಸುದೀರ್ಘ ಕಾಲದವರೆಗೆ ನಮ್ಮ ರಾಜ್ಯದಲ್ಲಿ ಆಡಳಿತ ನಡೆಸಿದ ಸರಕಾರವು ಕನ್ನಡ ನಾಡುನುಡಿಗಳ ಪರವಾದ ಅನೇಕ ಯೋಜನೆಗಳ ಕುರಿತು ನಿರಾಸಕ್ತಿ ತೋರಿಸಿತು. ಕೇಂದ್ರ ಸರ್ಕಾರವೂ ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆ ಅನುಸರಿಸುತ್ತಿತ್ತು. ದಕ್ಷಿಣದ ರಾಜ್ಯಗಳ ಪೈಕಿ ತಮಿಳುನಾಡು ಮಾತ್ರವೇ ತನ್ನ ಪಾಲಿಗೆ ಬರಬೇಕಾದುದನ್ನು ಗಳಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಿತ್ತು. ಕನ್ನಡದ ಜನತೆ ನಿರಾಶೆಯ ಅಂಚನ್ನು ತಲುಪಿದ್ದ ಕ್ಷಣದಲ್ಲಿ ರಾಜ್ಯದ ರಾಜಕೀಯ ನಭದಲ್ಲಿ ನವ ಹರಿಕಾರನಂತೆ ಅನಂತಕುಮಾರರ ಆಗಮನವಾಯಿತು. 1996ರ ಲೋಕಸಭಾ ಚುನಾವಣೆಗಳಲ್ಲಿ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಮೊದಲ ಬಾರಿಗೆ ಸಂಸತ್ಸದಸ್ಯರಾಗಿ ಆಯ್ಕೆಯಾದ ಅನಂತಕುಮಾರ್ ನಿರಂತರವಾಗಿ ಆರು ಬಾರಿ ಆಯ್ಕೆಯಾದದ್ದಲ್ಲದೆ ಕೇಂದ್ರ ಸಚಿವ ಸಂಪುಟದಲ್ಲಿ ಮಂತ್ರಿಯಾಗಿಯೂ ಕರ್ನಾಟಕದ ಹಿತಾಸಕ್ತಿಯನ್ನು ತಪ್ಪದೆ ಕಾಯ್ದುಕೊಂಡು ಬಂದರು. ಪ್ರತಿಷ್ಠಿತ ಮಂತ್ರಿಪದವಿಯನ್ನೂ ತೊರೆದು ರಾಜ್ಯಾಧ್ಯಕ್ಷರ ಪದವಿಯನ್ನು ಸ್ವೀಕರಿಸಲು ನಾಡಿನ ಬಗ್ಗೆ ಅವರಿಗಿದ್ದ ಅಪಾರ ಅಭಿಮಾನವೇ ಕಾರಣವಾಯಿತು.

### ಕೇಂದ್ರ-ರಾಜ್ಯಗಳ ನಡುವಣ ಕೊಂಡಿ

ಕನ್ನಡನಾಡನ್ನು ವ್ಯಾಪಕವಾಗಿ ಸುತ್ತಿದ್ದ ಅನಂತಕುಮಾರ್, ನಾಡಿನ ತಳಮಟ್ಟದ ಸಮಸ್ಯೆಗಳ ಬಗ್ಗೆ ಅರಿವು ಹೊಂದಿದ್ದರು. ತಮಗೆ ದೊರೆತ ಅವಕಾಶಗಳನ್ನುಸದುಪಯೋಗಪಡಿಸಿಕೊಂಡ ಅವರು ಜಾತಿ, ಧರ್ಮ, ಪಕ್ಷ ಭೇದವಿಲ್ಲದೆ ಸಮಗ್ರ ಕನ್ನಡನಾಡಿನ ಅಭಿವೃದ್ಧಿಗೆ ಅಗತ್ಯವಿರುವ ಎಲ್ಲ ಕ್ರಮಗಳನ್ನೂ ತೆಗೆದುಕೊಂಡರು. ಅವರಿಂದ ಕರ್ನಾಟಕಕ್ಕೆ ಆದ ಉಪಕಾರ ಎಂದಿಗೂ ಮರೆಯುವಂಥದ್ದಲ್ಲ, ಅವರು ಕರ್ನಾಟಕ ಹಾಗೂ ದೆಹಲಿಯ ನಡುವೆ ಒಂದು ಕೊಂಡಿಯಂತಿದ್ದರು ಎಂದು ರಾಜ್ಯದ ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಕೊಂಡಾಡಿದರೆ, ಅನಂತಕುಮಾರ್ ದೆಹಲಿಯಲ್ಲಿ ಕರ್ನಾಟಕದ ದನಿಯಾಗಿ, ಎರಡೂವರೆ ದಶಕಗಳ ಕಾಲ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ನಡುವೆ ಸೇತುವೆಯಾಗಿ ರಾಷ್ಟ್ರ ರಾಜಕಾರಣದಲ್ಲಿ ವಿಭಿನ್ನ ರೀತಿಯ ಛಾಪು ಮೂಡಿಸಿದ್ದರು ಎಂದು ಇನ್ನೊಬ್ಬ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಸ್ಮರಿಸಿಕೊಳ್ಳುತ್ತಾರೆ.

### ಜಲವಿವಾದಗಳು

ಇದೇ ಮಾತುಗಳನ್ನು ಎಸ್ ಎಂ ಕೃಷ್ಣರವರ ಸಂಪುಟದಲ್ಲಿ ಜಲಸಂಪನ್ಮೂಲ ಖಾತೆಯ ಸಚಿವರಾಗಿದ್ದ ಹೆಚ್.ಕೆ. ಪಾಟೀಲರೂ ಹೇಳುತ್ತಾರೆ. ಕಳಸಾಬಂಡೂರಿ ನೀರಾವರಿ ಯೋಜನೆಯು ಅಂತಾರಾಜ್ಯ ವಿವಾದವಾಗಿ ಮಾರ್ಪಟ್ಟಾಗ ಅನಂತಕುಮಾರರು ನಮ್ಮ ಮನವಿಯ ಮೇರೆಗೆ ಮಧ್ಯೆ ಪ್ರವೇಶ ಮಾಡಿ ಸಂಕೀರ್ಣವಾದ ಸಮಸ್ಯೆಯನ್ನು ಜಾಣತನದಿಂದ ಬಗೆಹರಿಸಿದರು ಎಂದೂ ಅವರು ಸ್ಮರಿಸಿಕೊಳ್ಳುತ್ತಾರೆ. 2003ರಲ್ಲಿ ಕೇಂದ್ರ ಸರಕಾರದ ಭಾಗವಾಗಿದ್ದ ಅಣ್ಣಾಡಿಎಂಕೆ ಪಕ್ಷವು ಕಾವೇರಿ ನ್ಯಾಯಾಧಿಕರಣವನ್ನು ರಚಿಸಲು ಒತ್ತಡ ತಂದಾಗ ಕರ್ನಾಟಕದ ರಾಜಕೀಯ ಪಕ್ಷಗಳು ಮತ್ತು ಕನ್ನಡಪರ ಸಂಸ್ಥೆಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸೂಕ್ತ ತಂತ್ರಗಾರಿಕೆಯ ಮೂಲಕ ತಮಿಳುನಾಡಿನ ಹೊಂಚಿಕೆಗಳನ್ನು ವಿಫಲಗೊಳಿಸಿದರು.

ಕೃಷ್ಣಾ ನದಿಯ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ವಿಜಯಪುರ ಜಿಲ್ಲೆಯಲ್ಲಿ ನಿರ್ಮಿತವಾಗಿರುವ ಆಲಮಟ್ಟಿ ಜಲಾಶಯದ ಎತ್ತರವನ್ನು ಹೆಚ್ಚಿಸುವುದನ್ನು ವಿರೋಧಿಸಿ ಆಂಧ್ರಪ್ರದೇಶವು ಸರ್ವೋಚ್ಚ ನ್ಯಾಯಾಲಯದಲ್ಲಿ ತಕರಾರು ಅರ್ಜಿ ಸಲ್ಲಿಸಿತ್ತು. ಈ ಸಂದರ್ಭದಲ್ಲಿ ರಾಜ್ಯಸರಕಾರದ ವಿನಂತಿಯ ಮೇರೆಗೆ ವಾಜಪೇಯಿಯವರ ಅನುಮತಿಯನ್ನು ಪಡೆದು ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸಲು ಸರಕಾರದ ಆಕ್ಷೇಪವೇನೂ ಇಲ್ಲವೆಂದು ನ್ಯಾಯಾಲಯಕ್ಕೆ ತಿಳಿಸುವಂತೆ ಅಂದಿನ ಸಾಲಿಸಿಟರ್ ಜನರಲ್, ಶ್ರೀ ಹರೀಶ್ ಸಾಳ್ವೆಯವರನ್ನು ಕೋರಿದರು. ವಿರೋಧಿಗಳಿಗೆ ಚಳ್ಳೆಹಣ್ಣು ತಿನ್ನಿಸಿದ ಈ ಪ್ರಕರಣದಲ್ಲಿ ಎಲ್ಲರೂ ಅಚ್ಚರಿಗೊಳ್ಳುವಂತೆ ಆಣೆಕಟ್ಟಿನ ಎತ್ತರ 519.6 ಅಡಿಗಳಿಂದ 524.5 ಅಡಿಗಳಿಗೆ ಏರಿತು. ಇದರಿಂದ ರಾಜ್ಯದ ಲಕ್ಷಾಂತರ ಎಕರೆ ಕೃಷಿಭೂಮಿಗೆ ನೀರು ದೊರೆಯುವಂತಾಯಿತು. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ನೀಡುವಂತೆ ರಾಜ್ಯದಾದ್ಯಂತ ಚಳುವಳಿ ನಡೆಯುತ್ತಿದ್ದಾಗ ಚಳುವಳಿಗಾರರನ್ನು ಹುರಿದುಂಬಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ದೊಡ್ಡ ಪ್ರತಿಭಟನಾ ಕಾರ್ಯಕ್ರಮ ನಡೆಯುವಂತೆ ನೋಡಿಕೊಂಡರು. ಪುಟ 2 ರಲ್ಲಿ ಮುಂದುವರೆದಿದೆ



# ಸರಕಾರದ ಶಕ್ತಿ, ಕಾರ್ಯಕರ್ತರ ಆಸ್ತಿ

ಲೋಕಸಭೆಯಲ್ಲಿ ಅನಂತ ಕುಮಾರರ ಸಹಸದಸ್ಯನಾಗಿ ಹತ್ತು ವರ್ಷಗಳ ಕಾಲ ಕೆಲಸ ಮಾಡುವ ಸದವಕಾಶ ನನ್ನದಾಗಿತ್ತು. ಅವರ ನಗುಮುಖ ಮತ್ತು ಪ್ರಖರ ಚಿಂತನೆಗಳು ನನ್ನನ್ನು ಆಕರ್ಷಿಸಿದ್ದವು. ಅವರ 63 ನೆಯ ಜನ್ಮದಿನವನ್ನು ನಾವೆಲ್ಲ ಜೊತೆಯಾಗಿ ಆಚರಿಸುತ್ತಿರುವಾಗ ಅವರೇ ನಮ್ಮ ನಡುವೆ ಇಲ್ಲದಿರುವುದು ನೋವುಂಟುಮಾಡುತ್ತದೆ.

ನಾನು 2004 ರಲ್ಲಿ ರಾಜಕೀಯ ಕ್ಷೇತ್ರಕ್ಕೆ ಕಾಲಿರಿಸಿದೆ. ಅನಂತಕುಮಾರರನ್ನು ಹತ್ತಿರದಿಂದ ನೋಡಿದ್ದೂ 2004 ರಿಂದಲೇ. ಅದಕ್ಕೂ ಮೊದಲು ಪತ್ರಿಕೆಗಳ ಮುಖಾಂತರ ಅವರ ಬಗ್ಗೆ ತಿಳಿದುಕೊಂಡಿದ್ದೆ. ನಾನೂ ಸಂಘದ ಕಾರ್ಯಕರ್ತನಾಗಿರುವುದರಿಂದ ಅನಂತಕುಮಾರರ ಬಗ್ಗೆ ಸಹಜವಾದ ಗೌರವ ಹೊಂದಿದ್ದೆ. ಜೊತೆಗೆ ಹಿರಿಯರ ಮೇಲಿರುವ ಸಣ್ಣ ಭಯವೂ ಇತ್ತು. ಲೋಕಸಭೆಗೆ ನನ್ನನ್ನು ಪರಿಚಯ ಮಾಡಿಸಿದವರು ಶ್ರೀ ಸದಾನಂದ ಗೌಡರು. ಆದರೆ ಲೋಕಸಭೆಯ ವ್ಯವಹಾರಗಳ ಬಗ್ಗೆ ನಿರಂತರವಾದ ಮಾರ್ಗದರ್ಶನ ನೀಡಿದವರು, ಅನಂತಕುಮಾರರು. ಅನಂತಕುಮಾರರಿಗೆ ಅದ್ಭುತವಾದ ನೆನಪಿನ ಶಕ್ತಿಯಿತ್ತು. ಅಂತಹ ಶಕ್ತಿ ಮಾನ್ಯ ನರೇಂದ್ರ ಮೋದಿಯವರನ್ನು ಬಿಟ್ಟರೆ ಅನಂತಕುಮಾರರಿಗೆ ಮಾತ್ರವಿತ್ತು. ಇದಕ್ಕೊಂದು ಉದಾಹರಣೆ ನೀಡುತ್ತೇನೆ. ಮಂಗಳೂರಿನಲ್ಲಿ ಚಂದ್ರಹಾಸ ಅಡ್ಯಂತಾಯ ಎಂಬ ಹಿರಿಯ ಕಾಂಗ್ರೆಸ್ ಸದಸ್ಯರು ಭಾರತೀಯ ಜನತಾ ಪಕ್ಷ ಸೇರಿದ್ದರು. ಕಾಂಗ್ರೆಸಿಗೆ ಸೇರುವ ಮೊದಲು ನಮ್ಮ ಸಂಘಟನೆಯ ಕೆಲಸವನ್ನೂ ಅಲ್ಪಸ್ವಲ್ಪ ಮಾಡಿದ್ದರು. ಅವರ ಒಂದು ಕೆಲಸಕ್ಕಾಗಿ ಅನಂತಕುಮಾರರ ಕಾರ್ಯಾಲಯಕ್ಕೆ ಕರೆದುಕೊಂಡು ಹೋಗಿದ್ದೆ. ನಾನು ಅವರನ್ನು ಪರಿಚಯಿಸುವ ಮೊದಲೇ ಅನಂತಕುಮಾರರು ಅಡ್ಯಂತಾಯರ ಹೆಸರು ಹಿಡಿದು ಗುರುತಿಸಿ ಮಾತನಾಡಿಸಿದರು.

ನಾನು ವಿದ್ಯಾರ್ಥಿ ಪರಿಷತ್ತಿನ ಪೂರ್ಣಾವಧಿ ಕಾರ್ಯಕರ್ತನಾಗಿದ್ದಾಗ ಅನಂತಕುಮಾರರ ಮನೆಗೆ ಹೋಗಿ ಉಳಿದುಕೊಳ್ಳುತ್ತಿದ್ದೆ. ಪ್ರತಿಯೊಬ್ಬರ ಜೊತೆಗೂ ನೆನಪುಗಳನ್ನು ತಾಜಾ ಮಾಡಿಕೊಳ್ಳುತ್ತ ಸಂಬಂಧಗಳನ್ನು ಗಟ್ಟಿಯಾಗಿಸುವ ಸ್ವಭಾವ ಅವರದು. ಯಾರನ್ನೂ ದ್ವೇಷಿಸದೆ, ಎಲ್ಲರನ್ನೂ ಒಳಗೊಳ್ಳುವ ಹೃದಯ ವೈಶಾಲ್ಯ ಅವರಿಗಿತ್ತು. ನಾನು ಲೋಕಸಭಾ ಸದಸ್ಯನಾಗಿ ಐದು ವರ್ಷಗಳನ್ನು ಕಳೆದ ಮೇಲೆ ಒಂದು ಪತ್ರಿಕೆ ನನಗೊಂದು ಗೌರವ ಸಲ್ಲಿಸಿತ್ತು. ಇದಕ್ಕಾಗಿ ಒಂದು ಅಭಿನಂದನಾ ಕಾರ್ಯಕ್ರಮವನ್ನು ನಮ್ಮ ಕಾರ್ಯಕರ್ತರು ಮಂಗಳೂರಿನಲ್ಲಿ ಹಮ್ಮಿಕೊಂಡಿದ್ದರು. ಇಷ್ಟು ಸಣ್ಣ ಕಾರ್ಯಕ್ರಮಕ್ಕೆ ಅನಂತಕುಮಾರರನ್ನು ಕರೆಯುವುದು ಬೇಡ ಎಂದು ನಾನು ಸೂಚಿಸಿದ್ದೆ. ಆದರೆ, ನಮ್ಮ ಕಾರ್ಯಕರ್ತರ ಪ್ರೀತಿಗೆ ಮಣಿದ ಅನಂತಕುಮಾರರು ಸಮಾರಂಭಕ್ಕೆ ಆಗಮಿಸಿದ್ದಲ್ಲದೆ ಎಲ್ಲರಿಗೂ ಉತ್ಸಾಹ ತುಂಬುವಂತಹ ಅದ್ಭುತವಾದ ಭಾಷಣವನ್ನೂ ಮಾಡಿದರು. ರಾಷ್ಟ್ರಮಟ್ಟದ ಹಿರಿಯ ರಾಜಕಾರಣಿಯೊಬ್ಬರು ಸಾಮಾನ್ಯ ಕಾರ್ಯಕರ್ತನಾದ ನನ್ನಂತಹ ಕಿರಿಯ ಲೋಕಸಭಾ ಸದಸ್ಯನನ್ನು ಹೊಗಳುವುದು, ಅವರು ಕಾರ್ಯಕರ್ತರನ್ನು ಬೆಳೆಸುವ ರೀತಿಯನ್ನು ಸೂಚಿಸುತ್ತದೆ. ಅವರು ಸಂಸದೀಯ ವ್ಯವಹಾರಗಳ ಸಚಿವರಾದ ನಂತರ ನಡೆದ ಎರಡೂ ಅಧಿವೇಶನಗಳು ಗಲಭೆ, ಗದ್ದಲಗಳಿಲ್ಲದೆ ನಡೆದಿರುವುದು ಅವರ ಕುಶಲತೆಗೆ ಸಾಕ್ಷಿ; ವಿರೋಧಿಗಳನ್ನು ಕಟ್ಟಿಹಾಕುವ ಚತುರತೆಗೆ ನಿದರ್ಶನ. ವಿರೋಧಪಕ್ಷದ ನಾಯಕರ ಹತ್ತಿರ ಸಂವಾದ ನಡೆಸಿ ಅವರನ್ನು ಒಲಿಸಿಕೊಂಡು ಅಧಿವೇಶನದಲ್ಲಿ ಅತಿ ಹೆಚ್ಚು ಮಸೂದೆಗಳು ತಕರಾರಿಲ್ಲದೆ ಪಾಸಾಗುವಂತೆ ನೋಡಿಕೊಂಡದ್ದನ್ನು ಮರೆಯಲಾಗುವುದಿಲ್ಲ.



ನಳಿನ್‌ಕುಮಾರ್ ಕಟೀಲ್

ಅನಂತಕುಮಾರರ ದೃಷ್ಟಿ ಕೇವಲ ನಗರ ಕೇಂದ್ರಿತವಾಗಿರಲಿಲ್ಲ. ಅವರು ಗ್ರಾಮೀಣ ಭಾಗಗಳ ಜನರ ಸಮಸ್ಯೆಗಳನ್ನೂ ಗಂಭೀರವಾಗಿ ಅಧ್ಯಯನ ಮಾಡಿದ್ದರು. ಅದರ ಫಲವಾಗಿಯೇ ಬೇವುಲೇಪಿತ ಯೂರಿಯಾ, ಜನೌಷಧಿಗಳಂತಹ ಕ್ರಾಂತಿಕಾರಿ ಯೋಜನೆಗಳನ್ನು ಕಲ್ಪಿಸಿಕೊಳ್ಳುವುದು ಅವರಿಗೆ ಸಾಧ್ಯವಾಯಿತು. ಅವರು ಬದುಕಿರುವ ವರೆಗೂ ಕರ್ನಾಟಕದ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಅನಂತಕುಮಾರರ ಹತ್ತಿರ ಹೋಗುತ್ತಿದ್ದೆವು. ಕರ್ನಾಟಕದ ವಿಷಯ ಬಂದಾಗ ಅವರು ಮತ್ತು ಸದಾನಂದ ಗೌಡರು ರಾಜ್ಯದ ಎಲ್ಲ ಸಂಸತ್ಸದಸ್ಯರ ಸಭೆಗಳನ್ನು ಪಕ್ಷಾತೀತವಾಗಿ ಕರೆಯುತ್ತಿದ್ದರು. ಅದಕ್ಕೆ ಸಂಬಂಧಿಸಿದ ಮಂತ್ರಿಗಳೂ ಹಾಜರಿರುವಂತೆ ನೋಡಿಕೊಳ್ಳುತ್ತಿದ್ದರು. ಇದಕ್ಕೊಂದು ಉದಾಹರಣೆ, ಕೆಲವು ವರ್ಷಗಳ ಹಿಂದೆ ಕರ್ನಾಟಕವು ಎದುರಿಸಿದ ಅಡಿಕೆಯ ಸಮಸ್ಯೆ. ನನಗೂ ಅಡಿಕೆಗೂ ಏನು ಸಂಬಂಧ ಎಂದು ಚಿಂತಿಸದೆ ಇದು ನನ್ನ ರಾಜ್ಯದ ಸಮಸ್ಯೆ ಎಂದು ಭಾವಿಸಿದ ಅನಂತಕುಮಾರರು ಕ್ರಮ ತೆಗೆದುಕೊಂಡಿದ್ದರು. ಕಾವೇರಿ ಸಮಸ್ಯೆ ಉಲ್ಬಣಗೊಂಡು ತಮಿಳುನಾಡು ಕ್ಯಾತೆ ತೆಗೆದಾಗ ನಮ್ಮದೇ ಸರಕಾರ ಎಂಬ ಭಯದಿಂದ ಸುಮ್ಮನಾಗಬೇಡಿ, ಧೈರ್ಯದಿಂದ ಮುನ್ನುಗ್ಗಿ ಎಂದು ಕಾರ್ಯಕರ್ತರನ್ನು ಕರೆದು ಹೇಳಿದ್ದರು. ರಾಜ್ಯದ ಸಮಸ್ಯೆ ಎದುರಿಸುವಾಗ ಇತರ ಎಲ್ಲ ವಿಚಾರಗಳನ್ನು ಮರೆತು ರಾಜ್ಯದ ಪರವಾಗಿ ನಿಲ್ಲಬೇಕು ಎಂದು ಅವರು ಹೇಳಿದ್ದರು.

ಈ ರೀತಿಯ ಗಟ್ಟಿ ವ್ಯಕ್ತಿತ್ವದ ಅನಂತಕುಮಾರರು ರಾಜ್ಯದ ಸಮಸ್ಯೆಗಳಿಗೆ ಉತ್ತರ ನೀಡಬಲ್ಲವರಾಗಿದ್ದರು; ಕಾರ್ಯಕರ್ತರಲ್ಲಿ ಉತ್ಸಾಹ ತುಂಬುತ್ತಿದ್ದರು, ಸರಕಾರಕ್ಕೆ ಒಂದು ಶಕ್ತಿಯಾಗಿದ್ದರು. ಈ ರೀತಿಯಾಗಿ ಎಲ್ಲ ವಿಧಗಳಲ್ಲಿಯೂ ಸರ್ವಶ್ರೇಷ್ಠ ನಾಯಕರಾಗಿದ್ದ ಅನಂತಕುಮಾರರು ನಮಗೆ ಎಂದೆಂದಿಗೂ ಪ್ರೇರಣೆ ನೀಡುತ್ತಿರುತ್ತಾರೆ. ●




ಅನಂತ ಪಥ ಮಾಸ ಪತ್ರಿಕೆಯ 28 ನೇ ಸಂಚಿಕೆಯನ್ನು ಇತಿಹಾಸ ಅಕಾಡೆಮಿ ಅಧ್ಯಕ್ಷರಾದ ಶ್ರೀ ದೇವರಕೊಂಡಾ ರೆಡ್ಡಿ ಯವರು 22 ಅಕ್ಟೋಬರ್ 2022 ರಂದು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಶ್ರೀಮತಿ ರತ್ನಾ ಮೂರ್ತಿ ಸರ್ವಶ್ರೀ ಜಿ.ಎಂ ಇನಾಂದಾರ್, ಟಿ.ಎಸ್ ಗೋಪಾಲ್, ಜನಾರ್ದನ ತುಂಗ ಮೊದಲಾದವರು ಉಪಸ್ಥಿತರಿದ್ದರು.

## ಪುಟ 1 ರಿಂದ ನವಕರ್ನಾಟಕದ ಹರಿಕಾರ ಅನಂತಕುಮಾರ್

### ಕನ್ನಡಭಾಷೆಗೆ ಶಾಸ್ತ್ರೀಯ ಸ್ಥಾನಮಾನ

ಇದಾದ ಒಂದು ವಾರದಲ್ಲಿಯೇ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಲಭಿಸಿತು. ಕನ್ನಡಕ್ಕೆ ಸಂಬಂಧಿಸಿದ ವಿವಿಧ ಯೋಜನೆಗಳಿಗೆ ಕೇಂದ್ರದಿಂದ ಅನುದಾನ ದೊರೆಯಲೂ ಅನಂತಕುಮಾರ್ ಅನವರತ ಪ್ರಯತ್ನಿಸಿದರು. ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪೀಠ ಸ್ಥಾಪನೆಯ ಹಿಂದಿನ ಶಕ್ತಿ ಅನಂತಕುಮಾರ್. ಬ್ಯಾಂಕಿಂಗ್ ಪರೀಕ್ಷೆಗಳನ್ನು ಕನ್ನಡದಲ್ಲಿಯೇ ಬರೆಯುವ ಅವಕಾಶ ದೊರೆತದ್ದೂ ಅವರ ಪ್ರಯತ್ನದಿಂದಲೇ.

### ವಿಮಾನ ನಿಲ್ದಾಣ ಮತ್ತು ಸುವರ್ಣ ಚತುಷ್ಪಥ


ಬೆಂಗಳೂರಿನಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಅದಕ್ಕೆ ಬೆಂಗಳೂರಿನ ನಿರ್ಮಾಪಕ ಕೆಂಪೇಗೌಡರ ಹೆಸರನ್ನು ಇಡುವಲ್ಲಿ ಅನಂತಕುಮಾರರ ಪಾತ್ರ ಸರ್ವವಿದಿತ. ಇದಕ್ಕೆ ಪೂರಕವಾಗಿ ಕರ್ನಾಟಕದ ಸಂಪರ್ಕವೇ ಇಲ್ಲದೆ ಆಂಧ್ರದ ಮೂಲಕ ಹಾದುಹೋಗುತ್ತಿದ್ದ ಸುವರ್ಣ ಚತುಷ್ಪಥದ ಪಥವನ್ನೇ ಬದಲಿಸಿ ಬೆಂಗಳೂರಿನ ಮೂಲಕ ಹಾದುಹೋಗುವಂತೆ ಮಾಡಿದರು. ಧಾರವಾಡದಲ್ಲಿ ಐಐಟಿ, ಉಡಾನ್ ಯೋಜನೆಯನ್ನು ಉತ್ತರ ಕರ್ನಾಟಕದ ನಗರಗಳಿಗೆ ವಿಸ್ತರಿಸಿದ್ದು, ದೆಹಲಿಯಲ್ಲಿ ಮೊದಲ ಬಾರಿಗೆ ಕೆಂಪೇಗೌಡರ ರಾಷ್ಟ್ರೀಯ ಉತ್ಸವ, ಬೆಂಗಳೂರಿನಲ್ಲಿ ಬಡವರಿಗಾಗಿ 10,000 ಮನೆಗಳ ನಿರ್ಮಾಣ, ಹುಬ್ಬಳ್ಳಿಯಲ್ಲಿ ರೈಲ್ವೇ ವಿಭಾಗದ ನೈಋತ್ಯ ವಲಯದ ಕಚೇರಿ, ಬೆಂಗಳೂರಿನ ನಮ್ಮ ಮೆಟ್ರೋ ಯೋಜನೆ ಮುಂತಾದ ಹತ್ತು ಹಲವು ಯೋಜನೆಗಳ ಹಿಂದಿನ ರೂವಾರಿ ಅನಂತಕುಮಾರರು. ಬೆಂಗಳೂರಿಗೆ ಕಾವೇರಿ ನೀರು ಸರಬರಾಜಿನ ಮೂರನೇ ಹಾಗೂ ನಾಲ್ಕನೇ ಹಂತಗಳ ಮಂಜೂರಾತಿ, ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆಯಡಿ ಬೆಂಗಳೂರಿನಲ್ಲಿ ಹತ್ತು ಸಾವಿರ ಮನೆಗಳ ನಿರ್ಮಾಣ, ಹೊರ ವರ್ತುಲ ರಸ್ತೆ, ಉಪನಗರ ರೈಲ್ವೆ, ಬೆಂಗಳೂರಿನ ಸರೋವರಗಳ ಪುನಶ್ಚೇತನ, ಸಾವಯವ ತ್ಯಾಜ್ಯದಿಂದ ಗೊಬ್ಬರ ತಯಾರಿಕೆಯ ಯೋಜನೆ, ಪ್ಲಾಸ್ಟಿಕ್ ಮರುಬಳಕೆ ಘಟಕ, ವಿವಿಧೋದ್ದೇಶ ಸಭಾಂಗಣ, ತಂಗುದಾಣಗಳು, ಕ್ರೀಡಾಂಗಣ, ಕೊಳವೆಬಾವಿ, ಸಿಸಿಟಿವಿ ಕಣ್ಗಾವಲು ........ ಹೀಗೆ, ಅನಂತಕುಮಾರರು ನಿರ್ವಹಿಸದ ಜವಾಬ್ದಾರಿಗಳೇ ಇಲ್ಲವೆಂಬಷ್ಟು ವೈವಿಧ್ಯಮಯವಾಗಿವೆ. ಸದಸ್ಯರ ಆದರ್ಶಗ್ರಾಮ ಯೋಜನೆಯಡಿಯಲ್ಲಿ ಬನ್ನೇರುಘಟ್ಟ ಸಮೀಪದ ರಾಗಿಹಳ್ಳಿಯನ್ನು ದತ್ತು ತೆಗೆದುಕೊಂಡು ಸುಸ್ಥಿರ ಅಭಿವೃದ್ಧಿಯ ಮಾದರಿಯೊಂದನ್ನು ಕಲ್ಪಿಸಿದ್ದಾರೆ.

ಕನ್ನಡದಲ್ಲಿಯೇ ಸಹಿಮಾಡುವ ಅಪ್ಪಟ ಕನ್ನಡಾಭಿಮಾನಿ ಅನಂತಕುಮಾರ್ ವಿಶ್ವಸಂಸ್ಥೆಯಲ್ಲಿಯೂ ಕನ್ನಡವನ್ನು ಮೊಳಗಿಸಿದರು. ಕನ್ನಡದ ಬೆಳವಣಿಗೆಗಾಗಿ ಅನೇಕ ಜನಪ್ರಿಯ ಕಾರ್ಯಕ್ರಮಗಳನ್ನೂ ರೂಪಿಸಿದರು. ಕನ್ನಡವನ್ನೇ ಉಸಿರಾಡಿದ, ಕರ್ನಾಟಕದ ಹಿತಕ್ಕಾಗಿ ಅಹರ್ನಿಶಿ ದುಡಿದ ಅನಂತಕುಮಾರರನ್ನು ನಾಡು ಸದಾ ಸ್ಮರಿಸುತ್ತದೆ. ●

# ಅನಂತಯಾನ ಅಧ್ಯಾಯ- 5

# ಅನಾರೋಗ್ಯ ತಂದ ಆಪತ್ತು

**ಶ್ರೀ ಅನಂತಕುಮಾರರ ಜೀವನ ಕಥನ**
**ನಿರೂಪಣೆ : ಟಿ.ಎಸ್. ಗೋಪಾಲ್**



ನರಹರಿ ಶಾಸ್ತ್ರಿಗಳ ಪ್ರಸಿದ್ಧಿ ಹರಡಿದ ಹಾಗೆಲ್ಲ ಅವರನ್ನು ನೋಡಲು ಬರುವವರ ಸಂಖ್ಯೆಯೂ ಬೆಳೆಯಿತು. ಹೀಗೆ ಬರುವ ಜನರಲ್ಲಿ ಚಲನಚಿತ್ರಕ್ಕೆ ಮುಹೂರ್ತ ನಿಶ್ಚಯಿಸುವುದರಿಂದ ಮೊದಲುಗೊಂಡು ವ್ಯಾಪಾರದ ಕಷ್ಟನಷ್ಟ ಪರಿಹಾರದವರೆಗೆ, ಪಡೆಯಲು, ಜಾತಕ ಫಲ ತಿಳಿದುಕೊಳ್ಳುವುದರಿಂದ ಹಿಡಿದು ರೇಸ್ ಕುದುರೆ ಬಾಲಕ್ಕೆ ದುಡ್ಡು ಕಟ್ಟುವವರೆಗೆ ವೈವಿಧ್ಯಮಯ ಬೇಡಿಕೆಗಳನ್ನು ಮುಂದಿಡುವ ಜನಸಾಮಾನ್ಯರೂ ಗಣ್ಯಾತಿಗಣ್ಯರೂ ಇರುತ್ತಿದ್ದರು. ಬಂದವರಿಗೆಲ್ಲ ಇಲ್ಲವೆನ್ನದೆ ನರಹರಿ ಶಾಸ್ತ್ರಿಗಳು ಜ್ಯೋತಿಷದ ಆಧಾರದಲ್ಲಿ ಪರಿಹಾರ ಸೂಚಿಸುತ್ತಿದ್ದರು. ಇಂಥ ಸೂಚನೆಗಳು ಬಹುತೇಕ ಖಚಿತವಾಗಿರುತ್ತಿದ್ದುದೇ ನರಹರಿ ಶಾಸ್ತ್ರಿಗಳ ಪ್ರಸಿದ್ಧಿಗೆ ಕಾರಣವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಶಾಸ್ತ್ರಿಗಳು ಇರುತ್ತಿದ್ದುದು ಮನೆಯ ಹೊರಕೊಠಡಿಯೊಂದರಲ್ಲಿ. ಚಿಕ್ಕ ವಿಸ್ತೀರ್ಣದ ಆ ಕೊಠಡಿಯಲ್ಲೇ ಅವರ ಹಾಸಿಗೆ, ಬಂದವರಿಗೆ ಕುಳಿತುಕೊಳ್ಳುವುದಕ್ಕೆ ಜಾಗ, ಶಾಸ್ತ್ರಿಗಳ ಪುಸ್ತಕ ಪಂಚಾಂಗಗಳ ರಾಶಿ ಎಲ್ಲವೂ ನೆಲೆ ಕಾಣಬೇಕಾಗಿತ್ತು. ರೈಲ್ವೆ ಉದ್ಯೋಗಕ್ಕೆ ಹೋಗುತ್ತಿದ್ದ ಕಾಲಾವಧಿ ಬಿಟ್ಟಂತೆ ಶಾಸ್ತ್ರಿಗಳು ಆ ಚಿಕ್ಕ ಕೊಠಡಿಯಲ್ಲೇ ಇರುತ್ತಿದ್ದರು. ಮಹಾರಾಜರ ಕರೆಯ ಮೇರೆಗೆ ಎಂದೋ ಒಮ್ಮೆ ಅರಮನೆಗೆ ಹೋಗಿ ಬರುವುದನ್ನು ಬಿಟ್ಟರೆ ಬೇರೆ ತಿರುಗಾಟವಿಲ್ಲ, ವ್ಯಾಯಾಮವಿಲ್ಲ. ಈ ಪರಿಸ್ಥಿತಿಯೇ ನರಹರಿ ಶಾಸ್ತ್ರಿಗಳ ಅನಾರೋಗ್ಯಕ್ಕೆ ಎಡೆಗೊಟ್ಟಿತು.

ಶಾಸ್ತ್ರಿಗಳ ಆಪ್ತಮಿತ್ರರಲ್ಲಿ ಡಾ. ಮರಿಸ್ವಾಮಿ ಎಂಬ ವೈದ್ಯರು ಇದ್ದರು. ಸುಬ್ಬರಾಯನ ಕೆರೆಯ ಹತ್ತಿರ ವಾಸವಿದ್ದ ಮರಿಸ್ವಾಮಿಯವರ ಕ್ಲಿನಿಕ್ ಕೆ.ಆರ್.ಆಸ್ಪತ್ರೆಯ ಸಮೀಪದಲ್ಲಿಯೇ ಇದ್ದಿತು. ಆಗಾಗ್ಗೆ ಶಾಸ್ತ್ರಿಯವರನ್ನು ಕಾಣಲು ಬರುತ್ತಿದ್ದ ಮರಿಸ್ವಾಮಿ, ಶಾಸ್ತ್ರಿಯವರ ಅನಾರೋಗ್ಯಕ್ಕೂ ಚಿಕಿತ್ಸೆ ಮಾಡತೊಡಗಿದರು. ಮೊದಲೇ ಮಧುಮೇಹಕ್ಕೆ ಗುರಿಯಾಗಿದ್ದ ಶಾಸ್ತ್ರಿಯವರು ಹೆಚ್ಚು ಗಾಳಿಸಂಚಾರವಿಲ್ಲದ ಪುಟ್ಟಕೋಣೆಯಲ್ಲಿ ಇರುವ ಕಾರಣದಿಂದಲೇ ಅವರನ್ನು ಶ್ವಾಸಕೋಶದ ತೊಂದರೆ ಬಾಧಿಸುತ್ತಿದೆಯೆಂದು ಮರಿಸ್ವಾಮಿಯವರು ಎಚ್ಚರಿಕೆ ಕೊಟ್ಟರು. ಇದನ್ನು ತಿಳಿದ ಗೋಪಾಲರತ್ನಂ ಎಂಬ ಮತ್ತೊಬ್ಬ ಗೆಳೆಯರು ನರಹರಿ ಶಾಸ್ತ್ರಿಗಳು ಕೃಷ್ಣಮೂರ್ತಿಪುರದ ವಾಸ್ತವ್ಯವನ್ನು ಬದಲಿಸುವುದೇ ಒಳ್ಳೆಯದೆಂದು ಒತ್ತಾಯಮಾಡತೊಡಗಿದರು. ಮಾತ್ರವಲ್ಲ, ಪಕ್ಕದ ಲಕ್ಷ್ಮೀಪುರ ಬಡಾವಣೆಯಲ್ಲಿರುವ ತಮ್ಮ ಮನೆಯ ಹಿಂಭಾಗದ ಮನೆಗೆ ಬಂದಿರುವಂತೆ ಹೇಳಿ ಸಲಹೆಗೆ ತಕ್ಕ ಪರಿಹಾರವನ್ನೂ ಸೂಚಿಸಿಬಿಟ್ಟರು. ಹೀಗೆ, ಕೃಷ್ಣಮೂರ್ತಿಪುರದಲ್ಲಿ ಮೂವತ್ತು ವರುಷಗಳ ಸುದೀರ್ಘ ವಾಸ್ತವ್ಯದ ನಂತರ ಶಾಸ್ತ್ರಿಗಳ ಅವಿಭಕ್ತ ಕುಟುಂಬ ಲಕ್ಷ್ಮೀಪುರಕ್ಕೆ ಹೋಗಿ ನೆಲೆಸುವಂತಾಯಿತು.




ಕೃಷ್ಣಮೂರ್ತಿಪುರದಲ್ಲಿ ನರಹರಿ ಶಾಸ್ತ್ರಿಗಳು ಇದ್ದ ಮನೆಯ ಮಾಲೀಕರಾದ ಶ್ರೀ ಬಾಲಕೃಷ್ಣರಾವ್ ಅವರೂ ಶಾಸ್ತ್ರಿಗಳಿಗೆ ತುಂಬ ಆತ್ಮೀಯರಾಗಿದ್ದರು. ಒಂದೇ ಕುಟುಂಬದವರೇನೋ ಎನ್ನಿಸುವಷ್ಟು ಒಡನಾಟವಿತ್ತು. ಈಗ ಲಕ್ಷ್ಮೀಪುರದ ಮನೆಯ ಮಾಲೀಕರಾದ ಗೋಪಾಲರತ್ನಂ ನರಹರಿ ಶಾಸ್ತ್ರಿಗಳ ಸಹಪಾಠಿ ಎಂದಮೇಲೆ ಹೇಳುವುದೇನು? ಶಾಸ್ತ್ರಿಗಳ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದ ಡಾಕ್ಟರ್ ಮರಿಸ್ವಾಮಿ ಆತ್ಮೀಯತೆಗಿಂತ ಮಿಗಿಲಾದ ಭಕ್ತಿಗೌರವಗಳಿಂದ ಶಾಸ್ತ್ರಿಗಳನ್ನು ಆದರಿಸುತ್ತಿದ್ದವರು. ಹೀಗೆ, ತಮ್ಮ ಆತ್ಮೀಯರ ಮೇಲ್ವಿಚಾರಣೆಯಲ್ಲಿ ಶಾಸ್ತ್ರಿಗಳು ನಿಶ್ಚಿಂತರಾಗಿದ್ದರು.

ಆಗಿನ ಲಕ್ಷ್ಮೀಪುರ ಬಡಾವಣೆಯ ನಿವೇಶನಗಳೂ ಮನೆಗಳೂ ಸಾಕಷ್ಟು ದೊಡ್ಡವು. ಪ್ರಸಿದ್ಧ ಇಂಗ್ಲೀಶ್ ಕಾದಂಬರಿಕಾರ ಆರ್.ಕೆ. ನಾರಾಯಣ್ ಇದ್ದುದು ಇದೇ ಬಡಾವಣೆಯಲ್ಲಿ. ಅವರ ಮನೆಯಿದ್ದ ರಸ್ತೆಯಲ್ಲೇ ಗೋಪಾಲರತ್ನಂ ಅವರ ಮನೆಯೂ ಇದ್ದಿತು. ಅವರ ಮನೆಯ ಆವರಣದಲ್ಲೇ ಹಿಂಭಾಗದಲ್ಲಿದ್ದ ಔಟ್ ಹೌಸ್ ನಲ್ಲಿ ನರಹರಿ ಶಾಸ್ತ್ರಿಗಳ ಕುಟುಂಬದವರು ವಾಸಕ್ಕೆ ತೊಡಗಿದರು. ಔಟ್ ಹೌಸ್ ಎಂದಾಕ್ಷಣ ಸಣ್ಣ ಮನೆಯೇನಲ್ಲ. ಕೃಷ್ಣಮೂರ್ತಿಪುರದ ಮನೆಗಿಂತ ಗಾಳಿ, ಬೆಳಕು ಚೆನ್ನಾಗಿತ್ತು. ನರಹರಿ ಶಾಸ್ತ್ರಿಗಳ ಅಧ್ಯಯನ, ವಿಚಾರ ವಿನಿಮಯಗಳಿಗೂ, ಅವರನ್ನು ಭೇಟಿಯಾಗಲು ಬರುವವರಿಗೂ ಯಾವ ತೊಂದರೆಯೂ ಆಗುವಂತಿರಲಿಲ್ಲ. ನಾರಾಯಣ ಶಾಸ್ತ್ರಿಯ ಪೋಷಣೆಯಲ್ಲಿದ್ದ ಹಸುಗಳನ್ನು ಈಗಾಗಲೇ ಕೊಟ್ಟುಬಿಡಲಾಗಿತ್ತು. ಕುಟುಂಬದ ಮಕ್ಕಳೂ ಬೆಳೆದು ದೊಡ್ಡವರಾಗತೊಡಗಿದ್ದರು. ಈ ವೇಳೆಗೆ, ನಾರಾಯಣ ಶಾಸ್ತ್ರಿಗಳೂ ಅವರ ಓರಗೆಯ ಸೋದರಬಂಧು ರಾಮಮೂರ್ತಿಯೂ ಬಿ.ಎಸ್. ಸಿ. ಓದುತ್ತಿದ್ದರು. ನರಹರಿ ಶಾಸ್ತ್ರಿಗಳ ಅಣ್ಣನ ಮಗ ಸೂರ್ಯನಾರಾಯಣ ಚಿಕ್ಕಂದಿನಲ್ಲೇ ಪೋಲಿಯೋ ದೆಸೆಯಿಂದ ಕಾಲುಗಳ ಶಕ್ತಿ ಕಳೆದುಕೊಂಡಿದ್ದ. ಆದರೆ, ತುಂಬ ಬುದ್ಧಿವಂತ. ತೆವಳುತ್ತಲೇ ಸಂಚರಿಸುತ್ತ ನರಹರಿ ಶಾಸ್ತ್ರಿಗಳ ಪೂಜೆಗೆ ನೆರವಾಗುತ್ತಿದ್ದ. ಅವರು ಹೇಳಿದಂತೆ ಜಾತಕವನ್ನೋ ಜಾತಕ ಫಲವನ್ನೋ ಬರೆದಿಡುತ್ತಿದ್ದ. ಸೂರ್ಯನಾರಾಯಣನಿಗೆ ಸ್ನಾನಾದಿಗಳ ಅಗತ್ಯವಿರುವಾಗ ನಾರಾಯಣ ಶಾಸ್ತ್ರಿಯೇ ತೋಳುಗಳಲ್ಲಿ ಎತ್ತಿಕೊಂಡು ಹೋಗಿ ಸಹಾಯಮಾಡುತ್ತಿದ್ದರು. ನರಹರಿ ಶಾಸ್ತ್ರಿಗಳ ಆರೋಗ್ಯ ಕ್ಷೀಣಿಸುತ್ತಿದ್ದಂತೆ ನಾರಾಯಣ ಶಾಸ್ತ್ರಿ ಅವರ ಆರೈಕೆಗೂ ನಿಲ್ಲಬೇಕಾಯಿತು. ನರಹರಿ ಶಾಸ್ತ್ರಿಗಳ ಶ್ವಾಸಕೋಶದಲ್ಲಿ ತೊಂದರೆ ಕಾಣಿಸಿಕೊಂಡಿತ್ತು. ಒಮ್ಮೆ ರಕ್ತವಾಂತಿಯೂ ಆಗಿ ಆಸ್ಪತ್ರೆ ಸೇರಬೇಕಾಯಿತು. ಅವರನ್ನು ಪರೀಕ್ಷಿಸಿದ ವೈದ್ಯರು ಶಾಸ್ತ್ರಿಗಳಿಗೆ ಕ್ಷಯರೋಗ ತಗುಲಿರುವುದನ್ನು ದೃಢಪಡಿಸಿದರು.

(ಪುಟ 4 ರಲ್ಲಿ ಮುಂದುವರೆದಿದೆ)

# ನಿರೀಕ್ಷೆಯನ್ನು ನಿಜವಾಗಿಸಿದ ನಾಯಕ



**ಬಾಬು ಕೃಷ್ಣಮೂರ್ತಿ**

ನಾನು ಬಾಲ್ಯದಿಂದಲೇ ಜನಸಂಘದ ಜಗನ್ನಾಥ ರಾವ್ ಜೋಷಿ, ಭಾವೂರಾವ್ ದೇಶಪಾಂಡೆ, ಯಡಿಯೂರಪ್ಪ ಮುಂತಾದ ದೊಡ್ಡ ದೊಡ್ಡ ನಾಯಕರನ್ನು ನೋಡುತ್ತ ಬಂದಿದ್ದೇನೆ. ಆದರೆ, ಅನಂತಕುಮಾರರಂತೆ ಭವಿಷ್ಯದ ಬಗ್ಗೆ ಭರವಸೆ ಮೂಡಿಸಿದ, ಇಡೀ ಕರ್ನಾಟಕದ ಮೇಲೆ ಪ್ರಭಾವ ಬೀರಿದ ಪ್ರತಿಭಾವಂತ ನಾಯಕರನ್ನು ನೋಡಿರಲಿಲ್ಲವೆನ್ನಬಹುದು. ಹುಬ್ಬಳ್ಳಿಯ ಈದ್ಗಾ ಮೈದಾನದ ಚಳವಳಿಯ ಮೂಲಕ ರಾಜಕೀಯ ಪ್ರವೇಶ ಮಾಡಿದ ಅನಂತಕುಮಾರ್ ಹೋರಾಟಗಳ ಮೂಲಕವೇ ರಾಷ್ಟ್ರಮಟ್ಟದ ನಾಯಕರಾಗಿ ಬೆಳೆದು ನಿಂತದ್ದನ್ನು ನಾವೆಲ್ಲ ನೋಡಿದ್ದೇವೆ.

ಅನಂತಕಮಾರರ ಮತ್ತು ನನ್ನ ಕ್ಷೇತ್ರಗಳು ಬೇರೆ ಬೇರೆ. ನಾವು ಮುಖಾಮುಖಿ ಭೇಟಿಯಾದ ಸಂದರ್ಭಗಳು ಕಡಿಮೆಯಾದರೂ ಪರಸ್ಪರ ಪ್ರೀತಿ ಮತ್ತು ಗೌರವಗಳನ್ನು ಹೊಂದಿದ್ದೆವು. ರಾಜ್ಯೋತ್ಸವ ಸಮಾರಂಭವೊಂದರಲ್ಲಿ ಇಬ್ಬರೂ ಭಾಗವಹಿಸಿದ್ದಾಗ ನಾನು ಅನಂತಕುಮಾರರಿಗೆ ಪ್ರಧಾನಿಯಾಗಲು ಬೇಕಾದ ಎಲ್ಲ ಲಕ್ಷಣಗಳೂ ಇವೆ ಎಂದಿದ್ದೆ. ಅಂದು ನನ್ನ ಮಾತುಗಳನ್ನು ಕೇಳಿಸಿಕೊಂಡ ಅನಂತಕುಮಾರ್ ತುಂಬ ಸಂಕೋಚಗೊಂಡಿದ್ದರು. ನಾನು ಉತ್ಪ್ರೇಕ್ಷೆ ಮಾಡಿರಲಿಲ್ಲ. ನಾನು ಅವರನ್ನು ಸಾಕಷ್ಟು ಹತ್ತಿರದಿಂದ ಗಮನಿಸಿದ್ದೆ. ಅನಂತಕುಮಾರ್ ಎಂಬ ವ್ಯಕ್ತಿಯ ನಿರ್ಮಾಣವಾದ ಬಗೆ ಅಧ್ಯಯನಯೋಗ್ಯವಾಗಿದೆ. ರಾಜಕೀಯವೇ ಒಂದು ಸಂಕೀರ್ಣವಾದ, ಕ್ಲಿಷ್ಟವಾದ ಕ್ಷೇತ್ರ. ಪರಿಸ್ಥಿತಿಗಳನ್ನು ನಿಭಾಯಿಸಲು ಎಲ್ಲ ರೀತಿಯ ಸ್ವಭಾವಗಳನ್ನೂ ರೂಢಿಸಿಕೊಳ್ಳಬೇಕಾಗುತ್ತದೆ. ಸಾವಿರಾರು ಜನರ ವಿಶ್ವಾಸವನ್ನು ಗಳಿಸಿ ಅವರಿಂದ ಕೆಲಸ ಮಾಡಿಸಿಕೊಳ್ಳಲು ವಿಶೇಷವಾದ ಕೌಶಲ್ಯಗಳನ್ನು ಹೊಂದಿರಬೇಕಾಗುತ್ತದೆ. ಅವೆಲ್ಲವನ್ನೂ ಇತರರನ್ನು ಗಮನಿಸುತ್ತಲೇ ಸುಲಭವಾಗಿ ಅನಂತಕುಮಾರ್ ರೂಢಿಸಿಕೊಂಡರು. ಸಂಘಟನಾ ಚಾತುರ್ಯ, ಬಿಕ್ಕಟ್ಟು ನಿವಾರಣೆ, ಜನರ ಜೊತೆ ವ್ಯವಹಾರ ಮುಂತಾದ ಎಲ್ಲವೂ ಅವರನ್ನು ಅಪರೂಪದ ವ್ಯಕ್ತಿಯನ್ನಾಗಿಸಿತ್ತು.

ಪ್ರಧಾನಿ ನರೇಂದ್ರ ಮೋದಿಯವರು ಅನೇಕ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ದೇಶವನ್ನು ಮುನ್ನಡೆಸುತ್ತಿರುವ ಕಾಲದಲ್ಲಿ ಅನಂತಕುಮಾರ್ ಅವರಂತಹ ವಿಶ್ವಾಸಪಾತ್ರ, ಕಾರ್ಯಶೀಲ ವ್ಯಕ್ತಿಗಳ ಅವಶ್ಯಕತೆ ಇದೆ.

ಅನಂತಕುಮಾರ್ ಮತ್ತು ತೇಜಸ್ವಿನಿ ವಿದ್ಯಾರ್ಥಿ ಕ್ಷೇತ್ರದಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದವರು. ನಂತರ ದಂಪತಿಗಳಾದರು. "ಮೇಡ್ ಫಾರ್ ಈಚ್ ಅದರ್" ಎಂಬಂತೆ ಪರಸ್ಪರರಿಗೆ ಪೂರಕವಾಗಿ ಕೆಲಸ ಮಾಡಿದರು. ಅನಂತಕುಮಾರರ ಸಾಧನೆಗಳ ಹಿಂದೆ ತೇಜಸ್ವಿನಿಯವರ ಬಲವಿತ್ತು. ಅನಂತಕುಮಾರ್ ತೀರಿಕೊಂಡ ಮೇಲೆಯೂ ತೇಜಸ್ವಿನಿಯವರು ಅವರ ಅರೆಬರೆಯಾದ ಕನಸುಗಳನ್ನು ಪೂರ್ಣಗೊಳಿಸಲು ಕಂಕಣಬದ್ಧರಾಗಿದ್ದಾರೆ. ಜೊತೆಗೆ ಸಮಾಜಸೇವೆಯ ಹೊಸ ಮಜಲುಗಳನ್ನು ಸೃಷ್ಟಿಸಿಕೊಂಡು ಬೆಂಗಳೂರಿನಲ್ಲಿ ಒಂದು ಹೊಸ ಅಧ್ಯಾಯವನ್ನೇ ಪ್ರಾರಂಭಿಸಿದ್ದಾರೆ. ಅನಂತಕುಮಾರರೇ ತೇಜಸ್ವಿನಿಯವರ ಮೂಲಕ ಈ ಕೆಲಸಗಳನ್ನು ಮಾಡಿಸುತ್ತಿದ್ದಾರೆ ಎಂದು ಭಾಸವಾಗುತ್ತಿದೆ. ಅವರಿಗೂ, ಅದಮ್ಯಚೇತನ ಸಂಸ್ಥೆಗೂ ಶುಭ ಹಾರೈಕೆಗಳು. ●


ಪುಟ 3 ರಿಂದ

## ಅನಾರೋಗ್ಯ ತಂದ ಆಪತ್ತು

ಮೈಸೂರಿನ ಹೊರವಲಯದಲ್ಲಿದ್ದ ಕ್ಷಯರೋಗದ ಆಸ್ಪತ್ರೆಯಲ್ಲೂ ಚಿಕಿತ್ಸೆ ಪಡೆದು ಬಂದರು. ಮಧುಮೇಹದ ತೊಂದರೆಯೂ ಇದ್ದುದರಿಂದ ಅವರು ತುಂಬ ಬಾಧೆಪಡಬೇಕಾಯಿತು. ಇಷ್ಟಾಗಿಯೂ ತಮ್ಮ ಸಲಹೆ ಪಡೆಯಲು ಬಂದುಹೋಗುವ ಜನರಿಗೆ ಅವರ ಮಾರ್ಗದರ್ಶನ ಸದಾ ಲಭ್ಯವಿರುತ್ತಿತ್ತು.

ಸ್ವಾಭಿಮಾನಿಯಾದ ನರಹರಿ ಶಾಸ್ತ್ರಿಗಳು ಯಾರಿಂದಲೂ ಏನನ್ನೂ ಅಪೇಕ್ಷಿಸಿದವರಲ್ಲ. ಬಂದವರು ಕೊಟ್ಟ ಹಣವನ್ನೂ ಮುಟ್ಟುತ್ತಿರಲಿಲ್ಲ. ಇನ್ನು ತಮ್ಮ ಮಗ ನಾರಾಯಣ ಶಾಸ್ತ್ರಿ ಪದವೀಧರನಾಗಿದ್ದಾನೆ, ಅವನಿಗೊಂದು ಕೆಲಸ ಕೊಡಿ ಎಂದು ಯಾರನ್ನಾದರೂ ಕೇಳುವುದುಂಟೇ?

ಹಾಗೆ ನೋಡಿದರೆ, ದೊಡ್ಡ ದೊಡ್ಡ ಹುದ್ದೆಗಳಲ್ಲಿದ್ದವರು ಶಾಸ್ತ್ರಿಗಳ ಮನೆಗೆ ಬರುವುದಿತ್ತು. ಅವರ ಸಲಹೆ ಪಡೆಯುವುದೂ ಇತ್ತು. ಅವರೇ ಯಾರಾದರೂ ಮನಸ್ಸು ಮಾಡಿ ಶಾಸ್ತ್ರಿಗಳ ಮಗನಿಗೆ ಉದ್ಯೋಗ ಕಲ್ಪಿಸಲು ಏನೂ ಕಷ್ಟವಿರಲಿಲ್ಲ. ಆದರೆ, ಸಹಾಯಪಡೆಯುವ ತುಡಿತವಿದ್ದವರಿಗೆ ಸಹಾಯಹಸ್ತ ಚಾಚುವ ಮನಸ್ಸಿರಬೇಕಲ್ಲ!



ನಾರಾಯಣ ಶಾಸ್ತ್ರಿ ಬಿ.ಎಸ್. ಸಿ. ಮುಗಿಸಿದ ಮೇಲೆ ಕೆಲಸಕ್ಕೆ ಸೇರಲು ಸ್ವಲ್ಪ ಕಷ್ಟವೇ ಆಯಿತು. ಕುಸ್ತಿ, ಅಂಗಸಾಧನೆಗಳಿಗಾಗಿ ರಾಜ್ಯಮಟ್ಟದ ಪ್ರಶಸ್ತಿಗಳನ್ನು ಪಡೆದುದೂ ನೆರವಿಗೆ ಒದಗಲಿಲ್ಲ. ನರಹರಿ ಶಾಸ್ತ್ರಿಗಳನ್ನು ನೋಡಲು ಬರುತ್ತಿದ್ದವರಲ್ಲಿ ದಕ್ಷಿಣ ರೈಲ್ವೆ ಇಂಜಿನಿಯರ್ ಆಗಿದ್ದ ಡಿ. ವಿ ನರಸಿಂಹರಾಯರಿಗೂ ಡೆಪ್ಯುಟಿ ಅಕೌಂಟೆಂಟ್ ಜನರಲ್ ಆಗಿದ್ದ ಅವರ ಮಗನಿಗೂ ನಾರಾಯಣ ಶಾಸ್ತ್ರಿಗಳ ಪರಿಚಯವಿದ್ದಿತು. ಆದರೆ ಅವರಾಗಿ ಕೆಲಸ ಕೊಡಿಸಲು ಮನಸ್ಸು ಮಾಡಲಿಲ್ಲ. ನಾರಾಯಣ ಶಾಸ್ತ್ರಿಗಳು ಕೆಲಸಕ್ಕೆ ಅರ್ಜಿ ಹಾಕಿಕೊಂಡು ಸಂದರ್ಶನಕ್ಕೆ ಹೋದಾಗಲೂ ಲಕ್ಷ್ಯಕೊಡಲಿಲ್ಲ. ನಿನಗಿಂತ ಹೆಚ್ಚು ಅರ್ಹತೆ ಇದ್ದವರಿಗೆ ಕೊಡಬೇಕಲ್ಲಪ್ಪ ಎಂದು ಸಬೂಬು ಹೇಳಿ ಕಳುಹಿಸಿದರು.

ಈ ವೇಳೆಗೆ ನರಹರಿ ಶಾಸ್ತ್ರಿಗಳು ರೈಲ್ವೆ ಇಲಾಖೆಯ ಕೆಲಸವನ್ನು ತೊರೆದಿದ್ದರು. ಎಂದರೆ, ರಾಜೀನಾಮೆ ಕೊಟ್ಟಿರಲಿಲ್ಲ. ಅನಿವಾರ್ಯವಾಗಿ ಕೆಲಸಕ್ಕೆ ಗೈರುಹಾಜರಾಗಿದ್ದರು. ಅವರ ವ್ಯಕ್ತಿತ್ವದ ಘನತೆಯನ್ನು ಪರಿಗಣಿಸಿದ ಇಲಾಖೆಯು ಅವರಿಗೆ ನಿವೃತ್ತಿಯ ಸೌಲಭ್ಯಗಳನ್ನು ನೀಡಲು ತೀರ್ಮಾನಿಸಿತ್ತು. ನರಹರಿ ಶಾಸ್ತ್ರಿಗಳನ್ನು ಮಧುಮೇಹವೂ ಕಾಡುತ್ತಿದ್ದುದರಿಂದ ಗ್ಯಾಂಗ್ರಿನ್ ಅಪಾಯಕ್ಕೆ ಗುರಿಯಾಗುವ ಸಾಧ್ಯತೆಯೂ ಇದ್ದಿತು.

ನಾರಾಯಣ ಶಾಸ್ತ್ರಿಯ ತಮ್ಮ, ತಂಗಿ ಇನ್ನೂ ಕಾಲೇಜು ವ್ಯಾಸಂಗಮಾಡುತ್ತಿದ್ದರು. ಓರಗೆಯ ಬಂಧುಗಳಾದ ಸುಂದರಮೂರ್ತಿ ಮತ್ತು ರಾಮಮೂರ್ತಿಯವರು ಉದ್ಯೋಗಸ್ಥರಾಗಿ ಹೊರಗಿನ ಊರುಗಳಿಗೆ ತೆರಳಿದ್ದರು. ಕೊನೆಗೂ ೧೯೫೫ ರಲ್ಲಿ ನಾರಾಯಣ ಶಾಸ್ತ್ರಿಗಳಿಗೂ ರೈಲ್ವೆಯಲ್ಲಿ ಕೆಲಸ ಸಿಕ್ಕಿ ನಿರಾಳವಾಯಿತು.

ನಾರಾಯಣ ಶಾಸ್ತ್ರಿಗಳು ಕಾಲೇಜಿನಲ್ಲಿ ಓದುತ್ತಿದ್ದಾಗ ಕುಸ್ತಿವಿಭಾಗದಲ್ಲಿ ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರಲ್ಲ, ಹೀಗೊಂದು ಅವಧಿಯಲ್ಲಿ ಅಂತರ ವಿಶ್ವವಿದ್ಯಾನಿಲಯ ವಾರ್ಷಿಕ ಸ್ಪರ್ಧಾಕೂಟ ಬೆಂಗಳೂರಿನಲ್ಲಿ ಜರುಗಿತ್ತು. ಕ್ರೀಡಾಸ್ಪರ್ಧೆಗಳಲ್ಲದೆ ಭಾಷಣ, ನೃತ್ಯ ಮತ್ತಿತರ ಸಾಂಸ್ಕೃತಿಕ ಸ್ಪರ್ಧೆಗಳೂ ಏರ್ಪಟ್ಟಿದ್ದವು. ನಿರೀಕ್ಷೆಯಂತೆ ನಾರಾಯಣ ಶಾಸ್ತ್ರಿ ಕುಸ್ತಿಪಂದ್ಯಾವಳಿಯ ವಿಜೇತರಾಗಿ ಪದಕ ಕೊರಳಿಗೇರಿಸಿದ್ದರು. ವಿಜಯಸಾಧನೆಯ ಜೊತೆಗೇ ಅವರ ಅಂಗಸೌಷ್ಠವ ಅಲ್ಲಿ ಭಾಗವಹಿಸಿದ್ದವರೆಲ್ಲರ ಗಮನ ಸೆಳೆದಿತ್ತು.

ಬೆಂಗಳೂರಿನ ಯುವತಿಯರ ಗುಂಪಿನಲ್ಲಿ ಭಾಷಣ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲು ಬಂದಿದ್ದ ಗಿರಿಜಾ ಎಂಬ ತರುಣಿಯೂ ಇದ್ದಳು. ಗೆಳತಿಯರ ಅಂತರಂಗದ ಮಾತುಕತೆಗೆ ಅಂದಿನ ಕೇಂದ್ರ ವಿಷಯ, ನಾರಾಯಣ ಶಾಸ್ತ್ರಿಯ ದೇಹದಾರ್ಢ್ಯವೇ! ಆ ತರುಣ ನೋಡುವುದಕ್ಕೆ ಎಷ್ಟು ಆಕರ್ಷಕವಾಗಿದ್ದಾನೆ ಎನ್ನುವ ಮಾತೂ ಕೇಳಿಬಂದಿತು. ನೋಡಲು ತೆಳ್ಳಗಿದ್ದ ಗಿರಿಜೆಯನ್ನು ಹಾಸ್ಯ ಮಾಡಲು ಉಳಿದ ತರುಣಿಯರಿಗೆ ಅವಕಾಶ ಸಿಕ್ಕಿತು. ಸರಿ, ನಿನಗೆ ಛಾನ್ಸ್ ಸಿಕ್ಕಿದರೆ ಮದುವೆಯಾಗುತ್ತೀಯಾ ಎಂದು ಛೇಡಿಸತೊಡಗಿದರು. ತರುಣಿಯರ ಮೃದು ಹಾಸ್ಯ ನಗೆಯಲ್ಲಿ ತೇಲಿಹೋಯಿತು. ಆದರೆ, ತನ್ನ ಭಾಗ್ಯದಲ್ಲಿ ಅದೇ ಯುವಕನನ್ನು ಕೈಹಿಡಿಯುವ ಅವಕಾಶವಿದೆಯೆಂದು ಗಿರಿಜೆಗಾಗಲಿ, ಅವಳನ್ನು ಹಾಸ್ಯಮಾಡಿದ ಗೆಳತಿಯರಿಗಾಗಲಿ ಗೊತ್ತಾಗುವುದಾದರೂ ಹೇಗೆ? ●

# 'ಪಕ್ಷ ಕಟ್ಟುವುದನ್ನು ಕಲಿಸಿದ ಮಾರ್ಗದರ್ಶಕ'

ಅನಂತಕುಮಾರರು ಭಾರತೀಯ ಜನತಾ ಪಕ್ಷವನ್ನು ಸೇರಿದ ಸಂದರ್ಭದಲ್ಲಿ ಯಾರಿಗೂ ಕೂಡ ಅಧಿಕಾರಕ್ಕೆ ಬರುತ್ತೇವೆ ಎಂಬ ಕಲ್ಪನೆಯೂ ಇರಲಿಲ್ಲ. ಇಂದು ರಾಜ್ಯದಲ್ಲಿ ಪಕ್ಷವು ಸಂಘಟಿತವಾಗಿ ಬೆಳೆದು ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಲು ಮತ್ತು ರಾಜ್ಯದಿಂದ ೨೫ ಜನ ಸಂಸತ್ಸದಸ್ಯರು ಚುನಾಯಿತರಾಗಲು ಅನಂತಕುಮಾರರು ತಮ್ಮ ಜೀವಿತಕಾಲದಲ್ಲಿ ಮಾಡಿದ ಪರಿಶ್ರಮವೂ ಕಾರಣ ಎಂದರೆ ಅತಿಶಯೋಕ್ತಿಯಲ್ಲ.




**ಈಶ್ವರಪ್ಪ ಕೆ ಎಸ್**

ನಾನು ಮೊದಲ ಬಾರಿ ಮಂತ್ರಿಯಾದಾಗ ನೀರಾವರಿ ಖಾತೆ ನನ್ನ ಪಾಲಿಗೆ ಬಂದಿತು. ಇಷ್ಟು ದೊಡ್ಡ ಖಾತೆಯನ್ನು ನಿಭಾಯಿಸುವುದು ಹೇಗೆ ಎಂದು ನಾನು ಚಿಂತಿತನಾಗಿದ್ದೆ. ಆಗ ಪಕ್ಷದ ಕಚೇರಿಯಲ್ಲಿ ಸಿಕ್ಕಿದ ಅನಂತಕುಮಾರ್ "ಕರ್ನಾಟಕದಲ್ಲಿ ನೀರಾವರಿ ಕುರಿತು ನಾವು ಯಾವ ಯಾವ ಹೋರಾಟ ಮಾಡಿದ್ದೇವೆ ಎಂದು ನೆನಪಿಸಿಕೊಂಡು ಆ ಎಲ್ಲ ಸ್ಥಳಗಳನ್ನು ಸುತ್ತಾಡಿಕೊಂಡು ಬನ್ನಿ, ಗೊತ್ತಾಗುತ್ತದೆ" ಎಂದಿದ್ದರು. ಕರ್ನಾಟಕದ ನೀರಾವರಿ ಯೋಜನೆಗಳ ಸಮಗ್ರ ಮಾಹಿತಿಯನ್ನೂ ನೀಡಿದ್ದರು. ನಾನು ಆಯಾ ಸ್ಥಳಗಳಿಗೆ ಹೋಗಿ ಅಧಿಕಾರಿಗಳನ್ನು ಕರೆಸಿ ಮಾತನಾಡಿದಾಗ ಅವರೂ ಅವೇ ಮಾಹಿತಿಗಳನ್ನು ನೀಡಿದ್ದರು!

ವಿರೋಧ ಪಕ್ಷದಲ್ಲಿದ್ದು ಹೋರಾಟ ಮಾಡುವುದು ಸುಲಭ, ಅದರೆ ಅಧಿಕಾರ ದೊರೆತಾಗ ಆಡಳಿತದಲ್ಲಿ ಯಶಸ್ವಿಯಾಗುವುದು ಕಷ್ಟ. ಅಂತಹ ಸಂದರ್ಭಗಳಲ್ಲಿ ಅನಂತಕುಮಾರರು ಒಬ್ಬ ಅಧ್ಯಾಪಕನ ರೂಪದಲ್ಲಿ ನಮಗೆ ಮಾರ್ಗದರ್ಶನ ನೀಡುತ್ತಿದ್ದರು.

ಅನಂತಕುಮಾರರು ಮೊದಲ ಬಾರಿಗೆ ಚುನಾವಣೆಗೆ ನಿಂತಾಗ ಇವರ ಠೇವಣಿಯೂ ನಷ್ಟವಾಗುತ್ತದೆ, ಅಡ್ರೆಸ್ಸಿಗೂ ಇಲ್ಲದಂತೆ ಸೋಲುತ್ತಾರೆ ಎಂದು ಕುಹಕವಾಡಿದವರ ಬಾಯಿಮುಚ್ಚಿಸುವಂತೆ ಗೆದ್ದರು. ಅಲ್ಲಿಂದ ಮುಂದೆ ಅವರಿಗೆ ಸೋಲೇ ಇರಲಿಲ್ಲ.

ಪ್ರಾರಂಭದಲ್ಲಿ ನಾನು, ಯಡಿಯೂರಪ್ಪ ಮತ್ತು ಅನಂತಕುಮಾರ್ ಒಟ್ಟಿಗೆ ಕುಳಿತು ಹೋರಾಟಗಳ ರೂಪುರೇಷೆಗಳನ್ನು ತಯಾರಿಸುತ್ತಿದ್ದೆವು. ಚುನಾವಣೆ ಬಂದಾಗ ಅಭ್ಯರ್ಥಿಗಳ ಆಯ್ಕೆ ಮಾಡಲು ನಮಗೆ ೨೨೪ ಅಭ್ಯರ್ಥಿಗಳೇ ಸಿಗದಿದ್ದ ಕಾಲ. ಬಹಳ ತಿಣುಕಾಡಿ ೧೧೭ ಜನರ ಪಟ್ಟಿಯೊಂದನ್ನು ತಯಾರಿಸಿದೆವು. ನಮ್ಮ ಕೇಂದ್ರೀಯ ಮಂಡಳಿಯೂ ನಾವು ೧೧೭ ಜನ ಚುನಾವಣೆಗೆ ಸ್ಪರ್ಧಿಸುತ್ತೇವೆ ಎಂದರೆ ನಂಬುತ್ತಿರಲಿಲ್ಲ. ಆದರೂ ಪಟ್ಟಿಯನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಲು ಪತ್ರಿಕಾ ಗೋಷ್ಠಿಯೊಂದನ್ನು ಕರೆದಿದ್ದೆವು. ಗೋಷ್ಠಿಗೆ ಮೊದಲು ಅನಂತಕುಮಾರ್ "ನೀವು ಎಷ್ಟು ಸ್ಥಾನಗಳನ್ನು ಗೆಲ್ಲುತ್ತೀರಿ ಎಂದು ಪತ್ರಕರ್ತರು ಕೇಳಿಯೇ ಕೇಳುತ್ತಾರೆ, ಅದಕ್ಕೆ ನಾವು ಸರಕಾರ ರಚಿಸುತ್ತೇವೆ ಎಂದು ಹೇಳಿ" ಎಂದು ತಿಳಿಸಿದ್ದರು. ಗೆಲ್ಲಲು ನಾವು ನಿಲ್ಲಿಸಿದ ಎಲ್ಲ ಅಭ್ಯರ್ಥಿಗಳೂ ಗೆಲ್ಲಬೇಕು! ಅದು ಅನಂತಕುಮಾರರ ಆತ್ಮವಿಶ್ವಾಸ. ಅವರು ಅದನ್ನು ಕಾರ್ಯಕರ್ತರಲ್ಲಿಯೂ ತುಂಬುತ್ತಿದ್ದರು.

ರಾಜ್ಯದ ಯಾವುದೇ ರಾಜಕೀಯ ಪ್ರತಿನಿಧಿಗಳಿಗೆ ಮತ್ತು ಸಾಮಾನ್ಯ ಕಾರ್ಯಕರ್ತರಿಗೆ ಕೇಂದ್ರದಲ್ಲಿ ಕೆಲಸವಾಗಬೇಕಿದ್ದರೆ ಮೊದಲು ನೆನಪಾಗುವುದು ಅನಂತಕುಮಾರರೇ. ಯಾರೇ ಫೋನ್ ಮಾಡಿದರೂ ಅವರು ಸ್ಪಂದಿಸುತ್ತಿದ್ದರು. ಮರುಕ್ಷಣದಲ್ಲಿಯೇ ಕರೆ ಮಾಡಿ ಇಂತಹ ದಿನ ಇಂಥವರು ಇರುತ್ತಾರೆ, ನೀವು ಬಂದು ಬಿಡಿ ಎಂದು ತಿಳಿಸುತ್ತಿದ್ದರು. ಇದು ಪ್ರತಿಯೊಬ್ಬರ ಅನುಭವ.

ಹೋರಾಟಗಳ ವಿಷಯಕ್ಕೆ ಬಂದರೆ, ನಾನು ಮತ್ತು ಯಡಿಯೂರಪ್ಪನವರು ದೈಹಿಕ ಪ್ರಯತ್ನಗಳನ್ನು ಮಾಡಿದರೆ ಆ ಎಲ್ಲ ಹೋರಾಟಗಳ ಹಿಂದಿನ ಬುದ್ಧಿಶಕ್ತಿ ಅನಂತಕುಮಾರರದು. ಯಾವುದೇ ಹೋರಾಟಕ್ಕೆ ಮೊದಲು ರೈತರಿಗೆ, ಯುವಕರಿಗೆ ಸಂಬಂಧಿಸಿದ ಯಾವ ಹೋರಾಟಗಳನ್ನು ಕೈಗೆತ್ತಿಕೊಳ್ಳಬೇಕು, ಹೋರಾಟಗಳ ಸ್ವರೂಪ ಹೇಗಿರಬೇಕು ಎಂದು ಮೊದಲೇ ಚರ್ಚಿಸಿ, ಹೋರಾಟಕ್ಕೆ ಬೇಕಾದ ಬ್ಯಾನರ್, ಪೋಸ್ಟರ್‌ಗಳನ್ನು ಸಿದ್ಧಪಡಿಸಿಕೊಂಡ ನಂತರವೇ ಕಾರ್ಯಕರ್ತರ ಸಭೆಯನ್ನು ಕರೆಯುತ್ತಿದ್ದೆವು. ನಿರ್ಧಾರಗಳನ್ನು ಸಾರ್ವಜನಿಕವಾಗಿ ಪ್ರಕಟಿಸಿದ ಅರ್ಧ ಗಂಟೆಯ ಒಳಗೆ ಪೋಸ್ಟರು, ಬ್ಯಾನರುಗಳನ್ನು ಆಯಾ ಜಿಲ್ಲೆಯ ಕಾರ್ಯಕರ್ತರಿಗೆ ತಲುಪಿಸುತ್ತಿದ್ದೆವು.

ಹೋರಾಟಗಳ ಮೂಲಕ ಪಕ್ಷವನ್ನು ಬೆಳೆಸುವ ಪಾಠವನ್ನು ನಾವು ಅನಂತಕುಮಾರರಿಂದ ಕಲಿತೆವು. ಅಂದಿನ ಕಾಲದಲ್ಲಿ ಸಾಮಾನ್ಯ ವರ್ಗಗಳ ಜನರು ನಮ್ಮ ಪಕ್ಷಕ್ಕೆ ಬರುತ್ತಿರಲಿಲ್ಲ. ನಾವು ಅವರನ್ನು ಭೇಟಿಯಾದಾಗ "ಸೋಲುವುದಕ್ಕೆಂದು ನಾವು ನಿಮ್ಮ ಪಕ್ಷಕ್ಕೆ ಬರಬೇಕೇ?" ಎಂದು ಗೇಲಿ ಮಾಡುತ್ತಿದ್ದರು. ಆದರೆ, ಪಕ್ಷ ಬೇರು ಬಿಡುತ್ತಿರುವಂತೆ ಎಲ್ಲ ವರ್ಗಗಳ ಜನರೂ ಪಕ್ಷವನ್ನು ಸೇರಲಾರಂಭಿಸಿದರು. ಇಂದು ಪಕ್ಷದಲ್ಲಿ ಎಲ್ಲ ವರ್ಗಗಳ ಜನರೂ ಇದ್ದರೆ ಅದಕ್ಕೆ ಅನಂತಕುಮಾರರೇ ಕಾರಣ. ಅವರ ಜನ್ಮದಿನದ ಈ ಸಂದರ್ಭದಲ್ಲಿ ಅವರ ಮಾರ್ಗವನ್ನು ಅನುಸರಿಸುವುದೇ ನಾವು ಅವರಿಗೆ ಸಲ್ಲಿಸುವ ಶ್ರದ್ಧಾಂಜಲಿ ಎಂದು ನನ್ನ ದೃಢವಾದ ನಂಬಿಕೆ. ●

# ಸ್ತುತ್ಯರ್ಹ ಸೇವಾಪರತೆ

**- ದೊಡ್ಡರಂಗೇಗೌಡ**

ತನ್ನ ಅನನ್ಯವಾದ ಸಂಕಲ್ಪಬಲದಿಂದ ಗುರಿಯನ್ನು ಮುಟ್ಟಿದ ಮಹಾನ್ ಮಾನವತಾವಾದಿ, ಅನಂತಕುಮಾರ್. ತಾನಿರುವುದೇ ಜನರ ಕಲ್ಯಾಣಕ್ಕಾಗಿ ಎಂಬುದನ್ನು ಮತ್ತೆ ಮತ್ತೆ ನೆನಪಿಸಿಕೊಡುವಂತೆ ತನ್ನ ಕಾರ್ಯಗಳ ಮುಖಾಂತರವೇ ಶ್ರೇಷ್ಠತೆಯನ್ನು ತೋರಿ, ಕೇಂದ್ರದಲ್ಲಿ ಸಚಿವರಾದ ಮೇಲೆಯೂ ಜನಪರವಾದ ಕೆಲಸಗಳನ್ನು ಮಾಡಿ, ಅಳಿದ ಮೇಲೆಯೂ ಉಳಿದಿರುವ ಅನಂತಕುಮಾರರಿಗೆ ಅವರನ್ನು ನೆನಪಿಸಿಕೊಳ್ಳುವುದೇ ನಿಜವಾಗಿ ಋಣತೀರಿಸುವ ಕೆಲಸ.

ತನ್ನ ಅಭೀಷ್ಟೆಗಳನ್ನೇ ಮಹತ್ವಾಕಾಂಕ್ಷೆಯನ್ನಾಗಿ ಮಾಡಿಕೊಂಡು, ಧ್ಯೇಯವಾದಿಯಾಗಿ, ರಾಷ್ಟ್ರಪ್ರೇಮಿಯಾಗಿ ಮುನ್ನಡೆದ ಅನಂತಕುಮಾರರು ಒಬ್ಬ ಆದರ್ಶ ನಾಯಕ. ಅವರು ಹುಬ್ಬಳ್ಳಿಯಲ್ಲಿ ಎಬಿವಿಪಿ ಕಾರ್ಯಕರ್ತರಾಗಿ ಸೇರಿಕೊಂಡ ದಿನದಿಂದ ದೇಶಸೇವೆಯೇ ಈಶಸೇವೆ ಎಂದು ಪರಿಗಣಿಸಿ ಭಾರತಮಾತೆಯ ಪಾದಗಳಿಗೆ ತನ್ನ ಕೈಂಕರ್ಯವನ್ನು ನಿವೇದಿಸಿಕೊಳ್ಳುತ್ತ ಮುನ್ನಡೆದರು. ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಅನಂತಕುಮಾರ್ ಪ್ರತಿಷ್ಠಾನವು ಸೇವಾಪರವಾಗಿದೆ, ಸೇವೆಯಿಂದ ದೀಪ್ತವಾಗಿದೆ.

ಸೇವೆಯೆಂಬ ಮಾತು ಸವಕಲಾಗಿರುವ ಕಾಲದಲ್ಲಿ, ಸಮಾಜವೇ ಅಪಮೌಲ್ಯಗಳ ಬೀಡಾಗುತ್ತ ಇರುವ ಸಂದರ್ಭದಲ್ಲಿ ಮೌಲ್ಯಗಳನ್ನು ನಾಟಿ ಮಾಡಿದ ಕೃಷಿಕ, ಅನಂತಕುಮಾರ್. ಅದಮ್ಯ ಚೇತನದ ಮೂಲಕ ಲಕ್ಷಾಂತರ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಯೋಜನೆಯನ್ನು ಪ್ರಾರಂಭಿಸಿದ್ದು ಅವರ ಮುಂಗಾಣ್ಕೆಯ, ದರ್ಶನದ ಫಲ. ಈ ರೀತಿಯ ಮುಂಗಾಣ್ಕೆಯಿಲ್ಲದವರು ರಾಜಕಾರಣಿಗಳಾಗುವುದು ವ್ಯರ್ಥ. ಈಗಂತೂ ಅನಂತ ಪ್ರೇರಣಾ ಕೇಂದ್ರವು ಪುಸ್ತಕ, ಬಟ್ಟೆ, ಮತ್ತಿತರ ವಸ್ತುಗಳನ್ನು ನೀಡುವುದರ ಮೂಲಕ ಮಕ್ಕಳ ವ್ಯಕ್ತಿತ್ವವು ಸರ್ವಾಂಗೀಣವಾಗಿ ಬೆಳೆಯಲು ಪ್ರಚೋದನೆ ನೀಡುತ್ತಿದೆ.

ಅದಮ್ಯಚೇತನವು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಸಸ್ಯಾಗ್ರಹ ಕಾರ್ಯಕ್ರಮವೂ ಅನನ್ಯವಾದುದು. ಇಂದು ಜಗತ್ತು ಎದುರಿಸುತ್ತಿರುವ ಪ್ರಕೃತಿವಿಕೋಪಗಳಿಗೆ ನಾವು ಕಾಡುಗಳನ್ನು ನಾಶ ಮಾಡಿರುವುದೇ ಕಾರಣ. ಇದನ್ನು ಮನಗಂಡ ತೇಜಸ್ವಿನಿಯವರು ನಮ್ಮ ಸುತ್ತಲೂ ಹಸಿರು ಸಂವರ್ಧನೆಯಾಗಲಿ ಎಂಬ ಘನವಾದ ಉದ್ದೇಶದಿಂದ ಮುಂದುವರಿಸಿಕೊಂಡು ಬರುತ್ತಿರುವ ಗಿಡನೆಡುವ ಕಾರ್ಯಕ್ರಮವು ಸ್ತುತ್ಯರ್ಹವಾಗಿದೆ. ●



**ಅನಂತ ಪ್ರೇರಣಾ ಕೇಂದ್ರ**

ಅದಮ್ಯ ಚೇತನ, ಸೌತ್ ಎಂಡ್ ವೃತ್ತ, ಜಯನಗರ, ಬೆಂಗಳೂರು
ಕೇಂದ್ರವು ವಾರದ ದಿನಗಳಲ್ಲಿ ಬೆಳಗಿನ 9.30 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ತೆರೆದಿರುತ್ತದೆ. ಪ್ರವೇಶ ಉಚಿತ.
ಸಂಪರ್ಕ ಸಂಖ್ಯೆ- 8904623967

# ಅನಂತಗುಣಗಣ ಭೂಷಿತ ಕುಮಾರ

**- ರಾಮಚಂದ್ರ ಗೌಡ**

ಅನಂತಕುಮಾರರ ಜೀವನ ತೆರೆದ ಪುಸ್ತಕ. ಖಾಸಗಿ ಎನ್ನುವಂಥದ್ದೇನೂ ಇರಲಿಲ್ಲ ಎಂಬಷ್ಟು ರಾಷ್ಟ್ರಕ್ಕೆ ಸಮರ್ಪಿತ ಜೀವನ ಅವರದು. ತಮ್ಮ ಕಾಲಕ್ಕಿಂತ ಬಹಳ ಮುಂದೆ ಇದ್ದ ಅವರು ತಮ್ಮ 59ನೆಯ ವಯಸ್ಸಿಗೇ ನಮ್ಮನ್ನಗಲಿದರು.

ಅವರದು ತುಂಬ ತೀಕ್ಷ್ಣವಾದ ಬುದ್ಧಿ. ಒಮ್ಮೆ ನಾನು ವಿಧಾನ ಪರಿಷತ್ತಿನ ಚುನಾವಣೆಗೆ ನಿಂತಿದ್ದಾಗ ವಿರೋಧಿಗಳು ಬೇರೊಬ್ಬ ರಾಮಚಂದ್ರಗೌಡರನ್ನು ನನ್ನೆದುರು ಉದ್ದೇಶಪೂರ್ವಕವಾಗಿ ನಿಲ್ಲಿಸಿದ್ದರು. ಪರಿಷತ್ತಿನ ಚುನಾವಣೆಯಲ್ಲಿ ಅಭ್ಯರ್ಥಿಯ ಹೆಸರು ಮಾತ್ರ ಇರುತ್ತದೆ, ಪಕ್ಷದ ಹೆಸರು ಮತ್ತು ಚಿಹ್ನೆ ಇರುವುದಿಲ್ಲ. ಆದುದರಿಂದ ಹೆಸರಿನಿಂದಲೇ ಗೊಂದಲ ಹುಟ್ಟಿಸಿ ಗೆಲ್ಲುವ ಹೊಂಚು ವಿರೋಧಿಗಳದ್ದಾಗಿತ್ತು. ಆದರೆ ಅನಂತಕುಮಾರರು "ಇನಿಷಿಯಲ್ ಇಲ್ಲದ, ಡಾಕ್ಟರ್ ಅಲ್ಲದ ರಾಮಚಂದ್ರಗೌಡರಿಗೆ ಮತ ನೀಡಿ" ಎಂದು ವ್ಯಾಪಕವಾಗಿ ಪ್ರಚಾರ ಮಾಡಿ ಎಣಿಕೆಯ ಮೊದಲ ಸುತ್ತಿನಲ್ಲಿಯೇ ನಾನು ಆಯ್ಕೆಯಾಗುವಂತೆ ತಂತ್ರ ರೂಪಿಸಿದ್ದರು.

ಅನಂತಕುಮಾರರ ತಾಯಿ, ಶ್ರೀಮತಿ ಗಿರಿಜಾ ಶಾಸ್ತ್ರಿಯವರು ಬೆಂಗಳೂರಿನ ಶೇಷಾದ್ರಿಪುರಂ ಹೈಸ್ಕೂಲಿನಲ್ಲಿ 1954 ಮತ್ತು 1956 ರ ನಡುವೆ ನನ್ನ ಸಹಪಾಠಿಯಾಗಿದ್ದರು. ನಂತರ ಅವರು ಹುಬ್ಬಳ್ಳಿಗೆ ಹೋದರು. ನಾನು ಮೊದಲ ಬಾರಿಗೆ ಎಂಎಲ್‌ಸಿ ಆದಾಗ ನನಗೆ ಶಾಸಕರ ಭವನದಲ್ಲಿ ಒಂದು ಕೋಣೆ ಕೊಟ್ಟರು. ನನಗೆ ಕೋಣೆಯ ಅಗತ್ಯವಿರಲಿಲ್ಲ. ಆದರೆ, ದುರದೃಷ್ಟವಶಾತ್ ಹಿರಿಯರಾದ ಕರಂಬಳ್ಳಿ ಸಂಜೀವ ಶೆಟ್ಟರು ಚುನಾವಣೆಯಲ್ಲಿ ಸೋತಿದ್ದರು. ಅನಂತಕುಮಾರರಿಗೆ ಇನ್ನೂ ಮದುವೆಯಾಗಿರಲಿಲ್ಲ. ಹೀಗಾಗಿ ಅವರಿಬ್ಬರೂ ನನಗೆ ಹಂಚಿಕೆಯಾದ ಕೋಣೆಯಲ್ಲಿ ವಾಸವಾಗಿದ್ದರು. ನಂತರ ಅನಂತಕುಮಾರರ ಮದುವೆಯ ಆರತಕ್ಷತೆ ಶೇಷಾದ್ರಿಪುರದಲ್ಲಿಯೇ ನಡೆಯಿತು. ಹುಬ್ಬಳ್ಳಿ-ಧಾರವಾಡದ ಉಪಮೇಯರ್ ಆಗಿದ್ದ ಅವರ ತಾಯಿ ರಾಜಕೀಯದಲ್ಲಿ ನುರಿತ ಮಹಿಳೆಯಾಗಿದ್ದರು. ಅವರದೇ ಹಾದಿಯಲ್ಲಿ ತೇಜಸ್ವಿನಿಯವರೂ ಸಾಗಿದ್ದಾರೆ.

ಕೋಟೆ ಕೊತ್ತಲಗಳ ಕಟ್ಟಿ ಮೆರೆದವರೆಲ್ಲ ಏನಾದರು? ಎಂಬುದು ಜನಪ್ರಿಯ ಮಾತು. ಜಗತ್ತಿಗೇನು ಬೇಕು ಎಂದು ಕೇಳುವವರು ಯಾರೂ ಇಲ್ಲ, ನನಗೇನು ಬೇಕು ಎಂದು ಕೇಳುವವರೇ ಎಲ್ಲರೂ ಎಂಬರ್ಥದ ಮಾತುಗಳನ್ನು ಕುವೆಂಪು ಹೇಳಿದ್ದಾರೆ. ಅನಂತಕುಮಾರರು ಕೇಂದ್ರದಲ್ಲಿ ಸಚಿವರಾದ ಮೇಲೆ ರಾಜ್ಯದ ಸುತ್ತೂರು, ಆದಿಚುಂಚನಗಿರಿ, ಪೇಜಾವರ ಮುಂತಾದ ಅನೇಕ ಮಠಮಂದಿರಗಳಿಗೆ ದೆಹಲಿಯಲ್ಲಿ ಜಾಗ ಮಾಡಿಕೊಟ್ಟರು. ದೆಹಲಿಯಲ್ಲಿದ್ದಾಗಲೂ ಕನ್ನಡವನ್ನು, ಕರ್ನಾಟಕವನ್ನು ಮರೆಯಲಿಲ್ಲ.

ಅನಂತಕುಮಾರರ ಸ್ಮರಣಶಕ್ತಿ ಅಗಾಧವಾದುದು. ಪ್ರಾರಂಭದಲ್ಲಿ ಅವರು ಕರಿಕೋಟು ಹಾಕಿಕೊಂಡು ವಕೀಲನಾಗುತ್ತೇನೆಂದು ಹೊರಟಿದ್ದರು. ನಾನು ಮತ್ತು ಯಡಿಯೂರಪ್ಪನವರು "ನೀನು ಕೋಟು ಧರಿಸಲು ಹುಟ್ಟಿದವನಲ್ಲ, ಇಲ್ಲಿ ಬಹಳ ಕೆಲಸವಿದೆ" ಎಂದು ಹೇಳಿ ಅವರನ್ನು ಉಳಿಸಿಕೊಂಡಿದ್ದೆವು. ವಕೀಲಿಕೆಗಿಂತ ದೊಡ್ಡ ಜವಾಬ್ದಾರಿ ಅವರಿಗಾಗಿ ಕಾದಿತ್ತು ಎಂದು ನಾವು ಭಾವಿಸಿದ್ದೆವು.



ಅನಂತಕುಮಾರ್ ಎಂದರೆ ಅಂತ್ಯವಿಲ್ಲದ ಹೆಸರು, ಅನಂತಕುಮಾರ್ ಎಂದರೆ ಅಂತ್ಯವಿಲ್ಲದ ಕಾರ್ಯ. ಪ್ರಧಾನಿಯಾಗುವ ಸಾಮರ್ಥ್ಯ ಹೊಂದಿದ್ದ ಅನಂತಕುಮಾರ್ ಬಹುಬೇಗ ನಮ್ಮನ್ನಗಲಿದರು. ಅನಂತಕುಮಾರ್ ಕ್ರಮಿಸಿದ ದಾರಿಯಲ್ಲಿಯೇ ಸಾಗಿದರೆ ಪಕ್ಷಕ್ಕೂ, ಸಂಘ ಪರಿವಾರಕ್ಕೂ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದು ನನ್ನ ಅಭಿಪ್ರಾಯ. ●

ಅನಂತಪಥ

ಅನಂತಪಥ ಮಾಸಪತ್ರಿಕೆಯು ಪ್ರತಿ ತಿಂಗಳ 22ನೆಯ ತಾರೀಕು ತಪ್ಪದೆ ಪ್ರಕಟವಾಗುತ್ತಿದೆ. ಈ ಪತ್ರಿಕೆಯ ಚಂದಾದಾರರಾಗಿ ಅನಂತಕುಮಾರ್ ಪ್ರತಿಷ್ಠಾನದ ಸೇವಾಚಟುವಟಿಕೆಗಳನ್ನು ಪ್ರೋತ್ಸಾಹಿಸಿ.

ರೂ. 1000 ನೀಡಿ ಚಂದಾದಾರರಾಗಲು ಮತ್ತು ಇತರ ವಿವರಗಳಿಗೆ ಈ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಿ: **8884182415**

# ಘನತತ್ತ್ವವೊಂದಕ್ಕೆ ಮನಸೋತ ಚೇತನ

ಘನತತ್ತ್ವವೊಂದಕ್ಕೆ ದಿನರಾತ್ರಿ ಮನಸೋತು
ನೆನೆಯದಿನ್ನೊಂದನೆಲ್ಲವ ನೀಡುತದರಾ |

ಅನುಸಂಧಿಯಲಿ ಜೀವಭಾರವನು ಮರೆಯುವುದು
ಹನುಮಂತನುಪದೇಶ – ಮಂಕುತಿಮ್ಮ ||



**- ವಿ ನಾಗರಾಜ್**

ಅನಂತಕುಮಾರರನ್ನು ನೆನೆಸಿಕೊಂಡಾಗಲೆಲ್ಲ ಮನಸ್ಸಿಗೆ ಮೊದಲು ಹೊಳೆಯುವುದು ಡಿವಿಜಿಯವರ ಮೇಲಿನ ಕಗ್ಗ. ಹನುಮಂತನಿಗೆ ರಾಮಭಕ್ತಿ ಮತ್ತು ರಾಮಕಾರ್ಯ ಮಾತ್ರವೇ ಜೀವನದ ಉದ್ದೇಶ. ಅದರಲ್ಲೇ ಆತ ಇಡೀ ಬದುಕನ್ನು ಸವೆಸಿಬಿಟ್ಟ. ಆತನ ಗಮನ ಇತರ ವಿಷಯಗಳ ಕಡೆಗೆ ಹೊರಳಲೇ ಇಲ್ಲ. ಅನಂತಕುಮಾರರೂ ಹನುಮಂತನಂತೆಯೇ ರಾಷ್ಟ್ರಭಕ್ತಿ ಮತ್ತು ತಾಯಿ ಭಾರತಿಯ ಆರಾಧನೆಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟವರು.

ಅವರು ಈ ಗುಣಗಳನ್ನು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ವಯಂಸೇವಕರಾಗಿ ಮೈಗೂಡಿಸಿಕೊಂಡರು; ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಸದಸ್ಯರಾಗಿ ವ್ಯಕ್ತಿತ್ವ, ಕರ್ತೃತ್ವ ಮತ್ತು ನೇತೃತ್ವದ ಲಕ್ಷಣಗಳನ್ನು ಮೈಗೂಡಿಸಿಕೊಂಡರು. ಸಮಾಜಕ್ಕೆ ಆದರ್ಶವಾಗಿ ಬೆಳೆದರು. ಇಂದು ಅವರು ನಮ್ಮ ನಡುವೆ ಇಲ್ಲವೆಂಬುದು ನಮಗೆ ತಿಳಿದಿದೆ. ಆದರೆ, ಅವರು ತಮ್ಮ ಜೀವನದ ಕಾಲದಲ್ಲಿ ಮಾಡಿದ ಸಾಧನೆಗಳು ನಮ್ಮ ಎದುರಿಗಿವೆ. ಅವರ ಕಾರ್ಯಗಳನ್ನು ಶ್ರೀಮತಿ ತೇಜಸ್ವಿನಿಯವರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ತೇಜಸ್ವಿನಿಯವರೂ ಸಾಮಾಜಿಕ ಕಾರ್ಯ, ಪರಿಸರ ಪ್ರಜ್ಞೆ, ರಾಷ್ಟ್ರಹಿತದ ಕಾರ್ಯಗಳ ಘನತತ್ತ್ವಕ್ಕೆ ಮನಸೋತು ಅವುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಮುಂಬರುವ ದಿನಗಳಲ್ಲಿ ಅನಂತಕುಮಾರರೂ ಅವರ ಮನೆಯೂ ಸಾಮಾಜಿಕ ಕಾರ್ಯಕರ್ತರಿಗೆ ಪ್ರೇರಣಾದಾಯಿ ಮೂಲಗಳಾಗಿ ಉಳಿಯುವುದರಲ್ಲಿ ಸಂಶಯವಿಲ್ಲ. ●

# ಗೀತೆಯ ಸಂದೇಶ



ಶ್ರೀ ಕೃಷ್ಣ ಸಂಪಗಾಂವಕರ,
ಶಾಂತಿ ಕುಟೀರ, ಕಣ್ಣೂರು

ನ ಜಾಯತೇ ಮ್ರಿಯತೇ ವಾ ಕದಾಚಿತ್ ।
ನಾಯಂ ಭೂತ್ವಾ ಭವಿತಾ ವಾ ನ ಭೂಯಃ ॥
ಅಜೋ ನಿತ್ಯಃ ಶಾಶ್ವತೋಽಯಂ
ಪುರಾಣೋ ।
ನ ಹನ್ಯತೇ ಹನ್ಯಮಾನೇ ಶರೀರೇ ॥ ಅ-೨,
ಶ್ಲೋ -೨೦ ॥

ಅರ್ಥ: ಈ ಆತ್ಮನು ಜನನ ಮರಣ ರಹಿತನು. ಅವನು ಇದ್ದನು, ಈಗ ಇಲ್ಲ, ಮುಂದೆ ಆಗುವನು ಎಂಬುದೂ ಇಲ್ಲ. ಆತ್ಮನು ಅಜನ್ಮನು, ನಿತ್ಯ ಅಸ್ತಿತ್ವದಲ್ಲಿರುವವನು, ಸನಾತನನೂ ಪುರಾತನನೂ ಆಗಿದ್ದಾನೆ. ಶರೀರದ ನಾಶವಾದರೂ, ಆತ್ಮನಾಶವಾಗಲಾರದು.

ಪ್ರತಿಯೊಂದು ವಸ್ತುವೂ 'ಜಾಯತೇ - ಹುಟ್ಟುವಿಕೆ, ಅಸ್ತಿ - ಇರುವಿಕೆ, ವರ್ಧತೇ - ಬೆಳೆಯುವಿಕೆ, ಪರಿಣಮತೆ - ಮಾರ್ಪಾಟು ಆಗುವಿಕೆ, ಕ್ಷೀಯತೇ - ಕ್ಷೀಣಿಸುವಿಕೆ, ನಶ್ಯತೇ - ನಶಿಸುವಿಕೆ' ಈ ಆರು ವಿಕಾರಗಳಿಂದ ಕೂಡಿದ್ದಾಗಿದೆ. ಆತ್ಮ ತತ್ವವು ಮಾತ್ರ ಈ ಎಲ್ಲ ವಿಕಾರಗಳಿಂದ ರಹಿತವಾದುದು.

ಹೆಚ್ಚು ಕಡಿಮೆ ಆಗದ, ದೇಶ - ಕಾಲದ ಮಿತಿ ಇಲ್ಲದ, ನಾಮ - ರೂಪ - ಗುಣವಿಲ್ಲದ, ಜನನ ಮರಣಕ್ಕೆ ಒಳಗಾಗದ, ಎಲ್ಲೆಲ್ಲಿಯೂ ಎಲ್ಲರಲ್ಲಿಯೂ ಇರುವ ಈ ಆತ್ಮವಸ್ತುವು ಯಾರಿಂದಲೂ ನಾಶ ಆಗಲಾರದು - ಯಾರನ್ನೂ ನಾಶ ಮಾಡಲಾರದು! ಹೀಗಿರುವಾಗ ಹೇ ಅರ್ಜುನ! ಯಾರು ಯಾರನ್ನು ಕೊಂದಾರು? ಹೆಚ್ಚು ಚಿಂತಿಸದೆ ನಿನ್ನ ಕರ್ತವ್ಯ ನೀನು ಮಾಡು. ●

# ಕನ್ನಡನಾಡಿನ ಪ್ರಾಚೀನ ದೇವಾಲಯಗಳು - ಒಂದು ಅವಲೋಕನ

## ದೇಗುಲದರ್ಶನ ಮಾಲಿಕೆ - 16

ಕರ್ನಾಟಕದಲ್ಲಿ ದೇವಾಲಯ ರಚನೆಗಳ ಮೊದಲ ಕುರುಹುಗಳು ಲಭ್ಯವಿರುವುದು ಬೌದ್ಧ ಸ್ತೂಪ, ಚೈತ್ಯಾಲಯಗಳ ರೂಪದಲ್ಲಿ. ಕಲ್ಬುರ್ಗಿ ಜಿಲ್ಲೆಯ ಸನ್ನತಿಯ ಸಮೀಪದ ಕನಗನಹಳ್ಳಿಯಲ್ಲಿ ಕ್ರಿಸ್ತಪೂರ್ವ ಮೂರನೆಯ ಶತಮಾನದಷ್ಟು ಹಳೆಯದಾದ ಬೌದ್ಧಸ್ತೂಪವಿದೆ. ಸಮ್ರಾಟ್ ಅಶೋಕನ ಕಾಲಕ್ಕೆ ನಿರ್ಮಾಣಗೊಳ್ಳಲು ಪ್ರಾರಂಭವಾದ ಈ ಕಟ್ಟಡದಲ್ಲಿ ಅಶೋಕನ ಹೆಸರನ್ನು ಮಾತ್ರವಲ್ಲದೆ ಅಶೋಕ ಮತ್ತವನ ಪರಿವಾರದ ಚಿತ್ರವನ್ನೂ ಕಾಣಬಹುದು. ಎರಡನೇ ಶತಮಾನದ ಚುಟು ಮನೆತನದ ಸಾತಕರ್ಣಿ ಅರಸನ ಮಗಳು ನಾಗಶ್ರೀ ಎಂಬವಳು ಬನವಾಸಿಯಲ್ಲಿ ಕೆರೆ ವಿಹಾರಗಳನ್ನು ಕಟ್ಟಿಸಿದ ಶಾಸನವೊಂದು ನಾಗಶಿಲ್ಪದೊಡನೆ ಬನವಾಸಿಯಲ್ಲಿದೆ.

ಮುಂದೆ, ನಮ್ಮ ನಾಡಿನ ಪುರಾತನ ದೇವಾಲಯಗಳ ನಿರ್ಮಾತೃಗಳ ಸಾಲಿನಲ್ಲಿ ಕದಂಬ ಅರಸರನ್ನು ಗುರುತಿಸಬಹುದು. ತಾಳಗುಂದದ ಪ್ರಣವೇಶ್ವರ ಮತ್ತು ಬನವಾಸಿಯ ಮಧುಕೇಶ್ವರ ಈ ಕಾಲದ ಮುಖ್ಯ ಗುಡಿಗಳು.

ದೇವಾಲಯ ನಿರ್ಮಾಣದಲ್ಲಿ ಬಾದಾಮಿ ಚಾಲುಕ್ಯರ ಶ್ರದ್ಧೆ ಆಸಕ್ತಿಗಳು ವಿಶೇಷವಾದವು. ಐಹೊಳೆ ಮತ್ತು ಬಾದಾಮಿಯ ಗುಹಾಲಯಗಳು ಈ ಮಾದರಿಯ ಅತ್ಯುತ್ಕೃಷ್ಟ ರಚನೆಗಳ ಸಾಲಿಗೆ ನಿದರ್ಶನಗಳು. ಇನ್ನು ಬಾದಾಮಿ ಅರಸರ ರಾಚನಿಕ ದೇವಾಲಯಗಳಲ್ಲಿ ಐಹೊಳೆ, ಮಹಾಕೂಟ, ಪಟ್ಟದಕಲ್ಲು ಮೊದಲಾದವು ದೇವಾಲಯಗಳ ರಚನೆ, ನಿರ್ಮಾಣ, ವಿನ್ಯಾಸಗಳ ವಿವಿಧ ರೂಪಗಳನ್ನು ನಮಗೆ ಪರಿಚಯಿಸುತ್ತವೆ.

ದಕ್ಷಿಣದ ಗಂಗರಾಜರು ದೇವಾಲಯ ಕಟ್ಟಡ ಮತ್ತು ಶಿಲ್ಪಕಲೆಗೆ ವಿಶೇಷ ಪ್ರಾಶಸ್ತ್ಯ ನೀಡಿದ್ದಾರೆ. ಶ್ರವಣಬೆಳಗೊಳದ ಬಾಹುಬಲಿಯ ಮೂರ್ತಿ ಗಂಗರ ಕಾಲದ ಶ್ರೇಷ್ಠ ನಿರ್ಮಿತಿ. ನರಸಮಂಗಲ, ಬೇಗೂರು, ಗಂಗವಾರ ಮೊದಲಾದ ದೇವಾಲಯಗಳಲ್ಲಿ ಗಂಗರ ಕಾಲದ ಉತ್ತಮ ಶಿಲ್ಪಗಳನ್ನು ಕಾಣಬಹುದು.







ಚೋಳರು ಕನ್ನಡನಾಡಿನ ಕೆಲವು ಭಾಗಗಳನ್ನು ಆಳುತ್ತಿದ್ದ ಕಾಲದಲ್ಲೂ ಹಲವು ದೇವಾಲಯಗಳನ್ನು ನಿರ್ಮಿಸಿದ್ದಾರೆ, ಇಲ್ಲವೇ ಜೀರ್ಣೋದ್ಧಾರ ಮಾಡಿ ದತ್ತಿಗಳನ್ನು ನೀಡಿದ್ದಾರೆ. ನೊಳಂಬರ ಕಾಲದ ದೇವಾಲಯಗಳಲ್ಲಿ ಹೇಮಾವತಿ, ಆವನಿಗಳನ್ನು ಉದಾಹರಿಸಬಹುದು. ಕಲ್ಯಾಣ ಚಾಲುಕ್ಯರು ಕರ್ನಾಟಕದ ದೇವಾಲಯ ವಾಸ್ತುಶಿಲ್ಪಕ್ಕೆ ಕೊಟ್ಟ ಕೊಡುಗೆ ಸಾಮಾನ್ಯವಲ್ಲ. ಹಲಸಿ, ಲಕ್ಕುಂಡಿ, ಗದಗ, ಲಕ್ಷ್ಮೇಶ್ವರ ಮೊದಲಾದ ಕಡೆಗಳಲ್ಲೂ ಹೊರರಾಜ್ಯಗಳಲ್ಲೂ ಚಾಲುಕ್ಯರು ಕಟ್ಟಿಸಿದ ದೇವಾಲಯಗಳು ಪ್ರಸಿದ್ಧವಾಗಿವೆ.

ಬೇಲೂರು, ಹಳೇಬೀಡು ಮೊದಲಾದ ಕಡೆಗಳಲ್ಲಿನ ಹೊಯ್ಸಳ ಶಿಲ್ಪಕಲೆ ದೇಶವಿದೇಶಗಳಲ್ಲಿ ಪ್ರಸಿದ್ಧಿಪಡೆದಿದೆ. ಚಾಲುಕ್ಯರ ಶಿಲ್ಪಕಲಾ ಮಾದರಿಗಳಿಗೆ ಹೊಯ್ಸಳ ಕಾಲದ ಶಿಲ್ಪಿಗಳು ಆಭೂಷಣಗಳ ಸೂಕ್ಷ್ಮ ಕುಸುರಿ ಕೆಲಸದ ಮೆರುಗು ನೀಡಿ ಅದ್ಭುತ ಶಿಲ್ಪಗಳನ್ನು ರಚಿಸಿದರು. ದೇವಾಲಯಗಳ ಹೊರಭಿತ್ತಿಯನ್ನು ಆಕರ್ಷಕ ಶಿಲ್ಪಗಳಿಂದಲೂ ಅಧಿಷ್ಠಾನದ ಪಟ್ಟಿಕೆಗಳಿಂದಲೂ ಅಲಂಕರಿಸಿದರು. ಶಿಖರ, ಕಳಶಗಳು ಭವ್ಯವಾಗಿ ಕಾಣುವಂತೆ ರೂಪಿಸಿದರು.


ಇವೆಲ್ಲ ಪುರಾತನ ದೇಗುಲಗಳು ಇಂದಿನವರೆಗೂ ಸುಸ್ಥಿತಿಯಲ್ಲಿ ಉಳಿದು ಬಂದಿರುವುದಕ್ಕಾಗಿ ನಾವು ವಿಜಯನಗರದ ಅರಸರಿಗೂ ಸಾಮಂತರಿಗೂ ಕೃತಜ್ಞರಾಗಿರಬೇಕು. ವಿಜಯನಗರ ಮೊದಲಾದ ಸ್ಥಳಗಳಲ್ಲಿ ದೇವಾಲಯಗಳನ್ನು ನಿರ್ಮಿಸುವುದರ ಜೊತೆಗೇ ಪೂರ್ವಕಾಲದ ಚೋಳ, ಗಂಗ, ಹೊಯ್ಸಳ ದೇಗುಲಗಳ ಜೀರ್ಣೋದ್ಧಾರ ಮಾಡುವಲ್ಲಿ ವಿಜಯನಗರದ ಅರಸರು ತೋರಿದ ಶ್ರದ್ಧೆ ಆಸಕ್ತಿಗಳ ಫಲವಾಗಿ ಈ ಎಲ್ಲ ದೇಗುಲಗಳು ವರ್ತಮಾನದವರೆಗೆ ಉಳಿದುಬರಲು ಸಾಧ್ಯವಾಗಿದೆ.

ಸೇವುಣ (ಮುನವಳ್ಳಿ), ಸಾಂತ (ಹುಂಚ), ಬಾಣ (ನಂದಿಗ್ರಾಮ), ಪಾಂಡ್ಯ (ಕಾರ್ಕಳ), ಸೋದೆಯ ನಾಯಕರು, ಕೆಳದಿಯ ನಾಯಕರು, ಚಿತ್ರದುರ್ಗದ ನಾಯಕರು, ಮಾಗಡಿಯ ಕೆಂಪೇಗೌಡ, ಉಮ್ಮತ್ತೂರಿನ ಪಾಳೇಗಾರರು - ಹೀಗೆ ವಿವಿಧ ಪ್ರಾಂತ್ಯಗಳ ಅರಸರು ತಂತಮ್ಮ ನಾಡಿನಲ್ಲಿ ದೇಗುಲಗಳನ್ನು ಕಟ್ಟಿ ದತ್ತಿಗಳನ್ನು ನೀಡಿದ್ದಾರೆ. ಈ ಪರಂಪರೆ ಮೈಸೂರು ಒಡೆಯರ ಕಾಲಕ್ಕೂ ಮುಂದುವರಿದು ಮೈಸೂರು, ನಂಜನಗೂಡು, ಹುಲ್ಲಹಳ್ಳಿ, ಚಾಮರಾಜನಗರ ಮೊದಲಾದೆಡೆಗಳಲ್ಲಿ ಒಡೆಯರು ಕಟ್ಟಿದ ದೇಗುಲಗಳಲ್ಲಿ ಇಂದಿಗೂ ಪೂಜೆ ಸಲ್ಲುತ್ತಿದೆ.

ಹೀಗೆ ದೇವಾಲಯನಿರ್ಮಾಣ, ಶಿಲ್ಪಕಲೆಗೆ ಪ್ರೋತ್ಸಾಹಗಳ ಮೂಲಕ ಕನ್ನಡನಾಡಿನ ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ನಮ್ಮ ನಾಡನ್ನಾಳಿದ ರಾಜವಂಶಗಳ ಕೊಡುಗೆ ವಿಶೇಷವಾಗಿದೆ.

**ಟಿ.ಎಸ್. ಗೋಪಾಲ್/ ಕೆಂಗೇರಿ ಚಕ್ರಪಾಣಿ** ●





ಈ ಕಾರ್ಯಕ್ರಮವನ್ನು ಯೂಟ್ಯೂಬ್ ನಲ್ಲಿ ನೋಡಲು ಬೇಕಾದ ಲಿಂಕ್ ಇಲ್ಲಿದೆ: http://YouTube.com/AnanthkumarPratishthana













ಸಸ್ಯಲೋಕ ಪರಿಚಯ ಮಾಲಿಕೆ- 14

# ಅಗ್ನಿಶಿಖಾ - ಗೌರೀ ಹೂವು

ಸನಾತನ ಪರಂಪರೆಯ ಪೂಜೆ, ಪುನಸ್ಕಾರಗಳಲ್ಲಿ ಹೂವುಗಳಿಗೆ ಮಹತ್ವದ ಸ್ಥಾನವಿದೆ. ಆದುದರಿಂದ ಅನೇಕ ಹೂವುಗಳ ಜೊತೆಗೆ ದೇವದೇವತೆಯರ ಹೆಸರೂ ಸೇರಿಕೊಂಡಿವೆ. ಕೃಷ್ಣತುಲಸಿ, ಬ್ರಹ್ಮಕಮಲ, ಕೃಷ್ಣಕಮಲ, ಮುಂತಾದ ಹೂವುಗಳ ಜೊತೆಗೆ ಗೌರಿಹೂವು. ಗೌರಿಹಬ್ಬದ ಸಮಯದಲ್ಲಿಯೇ ಹೆಚ್ಚಾಗಿ ಅರಳುವ ಹೂವಾಗಿರುವುದರಿಂದ ಇದನ್ನು ಗೌರಿ ಹೂ ಎಂದು ಕರೆದಿರಬಹುದು.

ಗೌರಿ – ಗಣೇಶ ಹಬ್ಬಗಳ ಭಾದ್ರಪದ ಮಾಸದಲ್ಲಿ ಬೇಲಿಗಳ ಮೇಲೆ ಹೆಚ್ಚಾಗಿ ಅರಳುವ ಈ ಹೂವು, ಅರಳಿ ನಿಂತಾಗ ಬೆಂಕಿಯ ನಾಲಗೆಯಂತೆ ಕಾಣುವುದರಿಂದ ಇದನ್ನು ಸಂಸ್ಕೃತದಲ್ಲಿ ಅಗ್ನಿಶಿಖಾ ಎಂದೂ ಕರೆಯುತ್ತಾರೆ. ಕೋಳಿಜುಟ್ಟಿನಂತೆ ಕಾಣುವುದರಿಂದ ಇದನ್ನು ಕೋಳಿಜುಟ್ಟಿನ ಹೂ, ಕೋಳಿಕುಟುಮ ಎಂದೂ ಕರೆಯುತ್ತಾರೆ. ಆಂಗ್ಲ ಭಾಷೆಯಲ್ಲಿ ಇದನ್ನು ಗ್ಲೋರಿ ಲಿಲ್ಲಿ, ಫ್ಲೇಮ್ ಲಿಲ್ಲಿ ಎಂದು ಅನ್ವರ್ಥವಾಗಿ ಕರೆಯುತ್ತಾರೆ. ಇದರ

ವೈಜ್ಞಾನಿಕ ಹೆಸರು - ಗ್ಲೊರಿಯೋಸಾ ಸುಪರ್ಬಾ (Gloriosa superba) ಕೊಡವರು ಈ ಹೂವನ್ನು 'ತೋಕ್ ಪೂ' ಅಂದರೆ ಕೋವಿ ಹೂ ಎಂದು ಕರೆಯುತ್ತಾರೆ. ಪ್ರತಿವರ್ಷ ಸೆಪ್ಟೆಂಬರ್ ತಿಂಗಳಲ್ಲಿ ನಡೆಯುವ ಕೈಲ್‌ಪೊಳ್ದ್ ಎಂಬ ಹಬ್ಬದ ದಿನದಂದು ತಮ್ಮ ಎಲ್ಲಾ ಕೋವಿ, ಕತ್ತಿಗಳನ್ನು ತೊಳೆದು, ಪೂಜಿಸಿ ಅವುಗಳನ್ನು ಗೌರಿಹೂವುಗಳಿಂದ ಅಲಂಕರಿಸುತ್ತಾರೆ. ಕನ್ನಡ ಬಾವುಟದ ಬಣ್ಣಗಳನ್ನು ಹೊಂದಿರುವ ಈ ಹೂವು ತಮಿಳುನಾಡಿನ ರಾಜ್ಯಪುಷ್ಪ ಎಂಬ ಗೌರವಕ್ಕೆ ಪಾತ್ರವಾಗಿರುವುದು ವಿಶೇಷ!

ಇದು ಜಿಂಬಾಬ್ವೆ ದೇಶದ ರಾಷ್ಟ್ರೀಯ ಪುಷ್ಪವೆಂದೂ ಪರಿಗಣಿತವಾಗಿದೆ. ಈ ವಿಶಿಷ್ಟ ಹೂವು ಮಲೆನಾಡು ಮತ್ತು ಕರಾವಳಿಯಲ್ಲಿ ಹೆಚ್ಚಾಗಿ ಕಾಣಸಿಗುತ್ತದೆ.

**ಸಸ್ಯ ವಿವರ:** ಮಲೆನಾಡು ಮತ್ತು ಕರಾವಳಿಯಲ್ಲಿ ಹೆಚ್ಚಾಗಿ ಕಂಡುಬರುವ ಈ ಹೂವಿನ ಬಳ್ಳಿಯು ಸತ್ವಯುತ ಮೃದು ಕಾಂಡಗಳನ್ನು ಹೊಂದಿರುತ್ತದೆ. ಹೂವಿನ ಮೊಗ್ಗು ಹಸಿರು ಬಣ್ಣದಿಂದ ಕೂಡಿರುತ್ತದೆ. ಅರಳುವಾಗ ಹಸಿರು, ಹಳದಿ ಮಿಶ್ರಿತ ಬಣ್ಣ ಹೊಂದಿದ್ದು ಎರಡನೇ ಹಂತದ ಬೆಳವಣಿಗೆಯಲ್ಲಿ ಪಕಳೆಗಳ ಮೇಲಿನ ಅರ್ಧ ಕೆಂಪು ಮತ್ತು ಕೆಳಗಿನ ಅರ್ಧ ಹಳದಿ ಬಣ್ಣವನ್ನು ಹೊಂದಿರುತ್ತದೆ. ಹೂವುಗಳು ಕಾಯಿಯಾಗಿ ಉದುರುವ ಮೊದಲು ಕೆಂಪುಬಣ್ಣವನ್ನು ತಳೆಯುತ್ತವೆ. ಗಿಡದ ಮುಖ್ಯ ಕೊಂಬೆಯಿಂದ ಟಿಸಿಲೊಡೆದ ಮೃದುವಾದ ಕಿರುಕೊಂಬೆಗಳ ತುತ್ತ ತುದಿಯಲ್ಲಿ ಹೂಗಳು ಅರಳಿ ನಿಂತಿರುತ್ತವೆ. ಹೂವುಗಳನ್ನು ಹೊತ್ತ ಕಿರುಕೊಂಬೆಗಳು ನೀಳವಾಗಿರುವುದರಿಂದ ಗಾಳಿಗೆ ತೂಗಾಡುತ್ತಿರುತ್ತವೆ. ಹೂವುಗಳು ಕೆಳಮುಖವಾಗಿ ಅರಳುತ್ತವೆ. ಪ್ರತಿ ಹೂವು ಮುರುಟಿಕೊಂಡಂತಿರುವ 6 ದಳಗಳನ್ನು ಹೊಂದಿರುತ್ತದೆ. ಅದರ ಕೆಳಗೆ ಹೂವಿನ ಅಂಡಾಶಯ ಮತ್ತು ಅಂಡಾಶಯದ ತುದಿಯಿಂದ ಶಲಾಕೆಯು ಚಾಚಿಕೊಂಡಿರುತ್ತದೆ. ಅಂಡಾಶಯದ ಸುತ್ತ 6 ಕೇಸರಗಳು ವೃತ್ತಾಕಾರವಾಗಿ ಸುತ್ತುವರೆದಿರುತ್ತವೆ. ಈ ಜಾತಿಯ ಎಲ್ಲ ಸಸ್ಯಗಳಂತೆ ಗೌರಿ ಹೂವಿನ ಬಳ್ಳಿಯೂ ಗಡ್ಡೆಗಳಿಂದ ಬೆಳೆಯುತ್ತದೆ. ಗಡ್ಡೆಗಳು ಮತ್ತು ಹೂವಿನ ಎಲ್ಲ ಭಾಗಗಳೂ ವಿಷಪೂರಿತವಾಗಿರುತ್ತವೆ. ಅಚಾತುರ್ಯದಿಂದ ದನಕರುಗಳು ಮತ್ತು ಮನುಷ್ಯರು ಈ ಗಡ್ಡೆಗಳನ್ನು ತಿಂದರೆ ಅವರ ಸಾವು ನಿಶ್ಚಿತ.

**ಉಪಯೋಗ:** ವಿಷಕಾರಿಯಾದರೂ ಕೂಡ ಇದು ಔಷಧೀಯ ಸಸ್ಯವಾಗಿ ಜನಪ್ರಿಯವಾಗಿದೆ. ಸರ್ಪದ ವಿಷವನ್ನು ಮನುಷ್ಯ ಶರೀರದಿಂದ ತೆಗೆಯಬಲ್ಲ ಪ್ರತಿವಿಷವಾಗಿ ಆಯುರ್ವೇದ ವಿಜ್ಞಾನಿಗಳು ಇದನ್ನು ಬಳಸಿದ್ದಾರೆ. ಇದು ಚೇಳಿನ ಕಡಿತದ ನಂಜು ನಿವಾರಕವೂ ಹೌದು ಚರ್ಮರೋಗಗಳು, ಮೂತ್ರಸಂಬಂಧಿ ನೋವುಗಳು, ಮೂಲವ್ಯಾಧಿ, ಬಂಜೆತನ, ಗಾಯಗಳು, ಸ್ವಪ್ನಸ್ಖಲನ, ಕುಷ್ಠರೋಗ, ತಲೆ ಹೇನಿನ ಕಾಟ, ಮೂತ್ರಪಿಂಡಗಳ ಖಾಯಿಲೆ, ಕ್ಯಾನ್ಸರ್, ಸಂಧಿವಾತ, ಮೊಡವೆಗಳು ಮುಂತಾದ ಹಲವು ರೋಗಗಳ ಚಿಕಿತ್ಸೆಯಲ್ಲಿ ಗೌರಿ ಹೂಬಳ್ಳಿಯ ವಿವಿಧ ಭಾಗಗಳನ್ನು ಬಳಸುತ್ತಾರೆ. ಬಾಣಗಳ ತುದಿಯಲ್ಲಿ ವಿಷಲೇಪನವಾಗಿಯೂ ಬಳಸುತ್ತಾರೆ. ವೈದ್ಯಕೀಯ ಕ್ಷೇತ್ರದ ಸಂಶೋಧನೆಗಳಲ್ಲಿ ಇದರ ಬಳಕೆ ವ್ಯಾಪಕವಾಗಿದೆ.

ಯಾವುದೇ ಆರೈಕೆಯನ್ನು ಬೇಡದೆ ಬೇಲಿಯ ಮೇಲೆ ತನ್ನಷ್ಟಕ್ಕೆ ತಾನು ಬೆಳೆಯುವ ಸಸ್ಯವೊಂದು ಇಷ್ಟೊಂದು ಔಷಧೀಯ ಗುಣಗಳನ್ನು ಹೊಂದಿದೆಯೆಂದರೆ ಅದು ಸೃಷ್ಟಿಯ ವೈಚಿತ್ರವಲ್ಲವೆ? ●



ಛಾಯಾ ಓಕ್ ಬಾಪಟ್

## ಸರಳ ಯೋಗಾಭ್ಯಾಸ

**ಕಟಿಶಕ್ತಿ ವಿಕಸನ - Katishakti Vikasana (Trunk Twisting)**

ಕಟಿ ಎಂದರೆ ನಡು ಅಥವಾ ಸೊಂಟ ಎಂದು ಅರ್ಥ. ಕಟಿಶಕ್ತಿ ವಿಕಸನದಿಂದ ಸೊಂಟ ಬಲವಾಗುತ್ತದೆ.

**ಆಸನ ಮಾಡುವ ರೀತಿ-** 1. ಸಮಸ್ಥಿತಿಯಲ್ಲಿ ನಿಲ್ಲಬೇಕು 2. ನಂತರ ಕಾಲುಗಳ ನಡುವೆ 2-3 ಅಡಿ ಅಂತರ ಇಟ್ಟುಕೊಂಡು ನೇರವಾಗಿ ನಿಲ್ಲಬೇಕು. ನಿಧಾನವಾಗಿ ತೋಳುಗಳನ್ನು ಎದೆಯ ಮಟ್ಟಕ್ಕೆ ಏರಿಕೆ ಮಾಡಿ, ಅಂಗೈಗಳನ್ನು ಪರಸ್ಪರ ಮುಖಮಾಡಿ ಹಾಗೂ ಸಮಾನಾಂತರವಾಗಿ ಇಟ್ಟುಕೊಳ್ಳಬೇಕು. 3. ಉಸಿರನ್ನು ಹೊರಬಿಡುತ್ತಾ ನಿಧಾನವಾಗಿ ದೇಹವನ್ನು ಆದಷ್ಟೂ ಎಡಬಾಗಕ್ಕೆ ತಿರುಚಿ (twist) ಎಡಗೈಯನ್ನು ನೇರವಾಗಿ ಇಟ್ಟುಕೊಂಡು ಜೊತೆಯಲ್ಲೇ ಬಲಗೈಯನ್ನು ಎಡ ಭುಜಕ್ಕೆ ತಾಕುವಂತೆ ತಿರುಗಿಸಿದ ಭಂಗಿಯಲ್ಲಿ ನಿಂತು ಮತ್ತೆ ನಿಧಾನವಾಗಿ ಉಸಿರು ಒಳಗೆ ತೆಗೆದುಕೊಂಡು ಮರಳಿ ಬರುವುದು. 4. ನಂತರ ಮತ್ತೆ ಉಸಿರನ್ನು ಹೊರಬಿಡುತ್ತಾ ನಿಧಾನವಾಗಿ ದೇಹವನ್ನು ಬಲಬಾಗಕ್ಕೆ ತಿರುಚಿ (twist) ಬಲಗೈಯನ್ನು ನೇರವಾಗಿ ಇಟ್ಟುಕೊಂಡು ಜೊತೆಯಲ್ಲೇ ಎಡಗೈಯನ್ನು ಬಲ ಭುಜಕ್ಕೆ ತಾಕುವಂತೆ ತಿರುಗಿಸಿದ ಭಂಗಿಯಲ್ಲಿ ನಿಂತು ಮತ್ತೆ ನಿಧಾನವಾಗಿ ಉಸಿರು ಒಳಗೆ ತೆಗೆದುಕೊಂಡು ಮರಳಿ ಬರುವುದು. 5. ಇದು ಒಂದು ಸುತ್ತು. ಒಟ್ಟಾರೆ ಮೂರು ಸುತ್ತು ಮಾಡತಕ್ಕದ್ದು. 6. ತದನಂತರ ಸಮಸ್ಥಿತಿಯಲ್ಲಿ ವಿಶ್ರಮಿಸುವುದು





**ಆಸನದ ಪ್ರಯೋಜನಗಳು-** 1. ಈ ಆಸನದಿಂದ ನಡುವಿನ ಶಕ್ತಿ ಹೆಚ್ಚುತ್ತದೆ, ಜೊತೆಗೆ ಹೊಟ್ಟೆಯ ಭಾಗದ ಸ್ನಾಯುಗಳು ಹಾಗೂ ಸಂಪೂರ್ಣ ವ್ಯವಸ್ಥೆ ಬಲಗೊಳ್ಳುತ್ತದೆ. ಹಾಗೂ ಹೊಟ್ಟೆಯ ಬದಿಯಲ್ಲಿರುವ ಬೊಜ್ಜು ಕರಗಿಸಲು ಸಹಾಯವಾಗುತ್ತದೆ. 2. ತುಂಬಾ ಹೊತ್ತು ಕೂತಾಗ ಅಥವಾ ಪ್ರಯಾಣ ಮಾಡಿದಾಗ ಈ ಆಸನ ಮಾಡಿದರೆ ಕುತ್ತಿಗೆ ಮತ್ತು ಸೊಂಟದ ನಮ್ಯತೆ ಹೆಚ್ಚಾಗಿ ವಿಶ್ರಾಂತಿ ದೊರೆಯುತ್ತದೆ. 3. ಹೃದಯ ಹಾಗೂ ಶ್ವಾಸಕೋಶದ ಶಕ್ತಿ ಹೆಚ್ಚಿಸಿ ಉಸಿರಾಟದ ಕ್ರಿಯೆಯನ್ನು ಆರೋಗ್ಯಕರವಾಗಿ ಇಡಲು ಸಹಾಯ ಮಾಡುತ್ತದೆ. 4. Cardio workout ಮತ್ತು ಬೆನ್ನು ನೋವಿನ ಚಿಕಿತ್ಸೆಗೆ ಸಹಾಯಕವಾಗುತ್ತದೆ.

**ಎಚ್ಚರಿಕೆ ವಹಿಸಬೇಕಾದವರು-** 1. ಹೃದಯಕ್ಕೆ ಸಂಬಂಧಿಸಿದ ಕಾಯಿಲೆಗಳು ಇದ್ದವರು ಸರಿಯಾದ ಸಲಹೆ ಪಡೆಯಬೇಕು 2. ಬೆನ್ನು ನೋವು disc disorder, ಸಂಧಿವಾತ, ಕಿಬ್ಬೊಟ್ಟೆ ಶಸ್ತ್ರಕ್ರಿಯೆಗೊಳಗಾದವರು, ರಜಸ್ವಲೆಯಾದವರು ಎಚ್ಚರಿಕೆ ವಹಿಸಬೇಕು ಹಾಗೂ ತಜ್ಞರ ಸಲಹೆ ಪಡೆಯಬೇಕು.

**ರಾಘವೇಂದ್ರ ಪ್ರಸಾದ್ ಎಸ್**, ಅಧ್ಯಕ್ಷರು - ಸಹಬಾಳ್ವೆ ●

ವ್ಯಕ್ತಿ ವಿಶೇಷ ಮಾಲಿಕೆ

# ಕನ್ನಡದ ಕುಲ ಪುರೋಹಿತ ಆಲೂರು ವೆಂಕಟರಾಯರು

"ಕರ್ನಾಟಕವೆಂಬುದೊಂದು ಜನಾಂಗವು. ಅದಕ್ಕೆ ಒಂದೇ ಒಂದು ಶರೀರ, ಮನಸ್ಸು ಮತ್ತು ಆತ್ಮಗಳಿರುತ್ತವೆಂಬ ಭಾವನೆಯು ಎಲ್ಲಿಯವರೆಗೆ ನಮ್ಮಲ್ಲಿ ಉತ್ಪನ್ನವಾಗುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಕನ್ನಡ ನುಡಿಯ ಅಭಿವೃದ್ಧಿಯು ಭರದಿಂದ ಸಾಗಲಾರದು"



1930ನೇ ಇಸವಿಯ ದಿನಾಂಕ 5 ರಿಂದ 7 ರ ವರೆಗೆ ಮೈಸೂರಿನಲ್ಲಿ ನಡೆದ 16 ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಕನ್ನಡದ ಕುಲಪುರೋಹಿತರೆಂದೇ ಖ್ಯಾತರಾದ ಆಲೂರು ವೆಂಕಟರಾಯರು ಹೇಳಿದ ಈ ಮಾತುಗಳು ಇಂದಿಗೂ ಪ್ರಸ್ತುತವಾಗಿವೆ. ನಾಲ್ಕಾರು ಉತ್ತಮ ಗ್ರಂಥಗಳನ್ನು ಬರೆದ ಕೂಡಲೆ ಕನ್ನಡ ವಾಙ್ಮಯ ಬೆಳೆಯುವುದೆಂದು ಭಾವಿಸಬಾರದು. ಮುದ್ರಕರು, ಪುಸ್ತಕ ಮಾರುವವರು ಲಘು, ಮಧ್ಯಮ ಮತ್ತು ಉದಾತ್ತ ಪುಸ್ತಕಮಾಲೆಗಳನ್ನು ತಯಾರಿಸಿ ಕರ್ನಾಟಕವನ್ನೆಲ್ಲ ವಾಚನಾಲಯಗಳ ಜಾಳಿಗೆಯಿಂದ ತುಂಬಿಬಿಡಬೇಕು. ಕನ್ನಡಿಗರು ತಮ್ಮಲ್ಲಿನ ಅಭಿಮಾನವನ್ನು ಜಾಗ್ರತ ಪಡಿಸಬೇಕು, ಇದೊಂದು ನಿರಂತರವಾಗಿ ನಡೆಯುವ ಪ್ರಕ್ರಿಯೆಯಾಗಬೇಕು ಎಂದು ಅವರು ಹೇಳಿದ ಮಾತು ಕನ್ನಡ ಸಾಹಿತ್ಯವನ್ನು ಓದುವ ಹವ್ಯಾಸ ಕಡಿಮೆಯಾಗುತ್ತಿರುವ ಈ ಕಾಲದಲ್ಲಿ ಎಂದಿಗಿಂತ ಹೆಚ್ಚು ಪ್ರಸ್ತುತವಾಗಿದೆ.

ಭಾಷಾವಾರು ಪ್ರಾಂತ್ಯಗಳ ಕಲ್ಪನೆಯ ಬೆನ್ನಲ್ಲೇ ಪ್ರತ್ಯೇಕತೆಯ ಕೂಗೂ ಕೇಳಿಬಂದಿತ್ತು. ಎಲ್ಲರನ್ನೂ ಒಗ್ಗೂಡಿಸುವ ಭಾಷೆಯೇ ಪ್ರತ್ಯೇಕತೆಗೂ ಇಂಬುಕೊಡುವುದು ವಿಪರ್ಯಾಸ. ಆದರೆ ಕರ್ನಾಟಕ ಏಕೀಕರಣದ ಅಧ್ವರ್ಯು ಆಲೂರರ ಜೀವನ ಎಲ್ಲ ಕನ್ನಡಿಗರ ವಿಚಾರಧಾರೆಯನ್ನೂ ಪ್ರತಿನಿಧಿಸುತ್ತದೆಯೆಂದರೆ ಅತಿಶಯೋಕ್ತಿಯಲ್ಲ. ಮದ್ರಾಸು, ಮೈಸೂರು, ಹೈದರಾಬಾದ್ ಮತ್ತು ಮುಂಬೈ ಪ್ರಾಂತ್ಯಗಳಲ್ಲಿ ಹರಿದು ಹಂಚಿಹೋಗಿದ್ದ ಕನ್ನಡಿಗರ ಸ್ವಾಭಿಮಾನವನ್ನು ಬಡಿದೆಬ್ಬಿಸಲು ನಿರಂತರವಾಗಿ ಸುತ್ತಾಡುತ್ತಿರುವ ಸಂದರ್ಭದಲ್ಲಿಯೇ ಅವರು ದೇಶಾಭಿಮಾನದ ಕಿಚ್ಚನ್ನು ಹೊತ್ತಿಸಿಕೊಂಡು ಸ್ವಾತಂತ್ರ್ಯ ಹೋರಾಟದಲ್ಲಿಯೂ ಭಾಗವಹಿಸಿದರು. ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ಓದುತ್ತಿದ್ದಾಗ ಸ್ವಾತಂತ್ರ್ಯವೀರ, ವೀರ ಸಾವರ್ಕರ್ ಮತ್ತು ಸೇನಾಪತಿ ಬಾಪಟ್ ಇವರ ಸಹಪಾಠಿಗಳಾಗಿದ್ದರು.

ಸಹಜವಾಗಿಯೇ 1921 ರಲ್ಲಿ ಮಹಾತ್ಮಾ ಗಾಂಧಿಯವರು ಪ್ರಾರಂಭಿಸಿದ ಚಳವಳಿಯಲ್ಲಿ ನೇರವಾಗಿ ಭಾಗವಹಿಸಿದರು. ಇದಕ್ಕೂ ಮೊದಲು ಶ್ರೀನಿವಾಸ ಕೌಜಲಗಿ, ಗೋವಿಂದರಾವ್ ಯಾಳಗಿ ಮತ್ತಿತರರ ಜೊತೆ ಸೇರಿಕೊಂಡು ತಿಲಕರು ಪ್ರಾರಂಭಿಸಿದ್ದ ಹೋಂರೂಲ್ ಚಳವಳಿಗೆ ಕರ್ನಾಟಕದಲ್ಲಿ ಜನಬೆಂಬಲವನ್ನು ಸಂಗ್ರಹಿಸಿದ್ದರು. 1928 ರಲ್ಲಿ ಅವರು "ರಾಷ್ಟ್ರೀಯ ಮೀಮಾಂಸೆ" ಎಂಬ ಒಂದು ಕಿರುಹೊತ್ತಿಗೆಯನ್ನು ಬರೆದು ಪ್ರಕಟಿಸಿದರು. 1931 ರಲ್ಲಿ ಬ್ರಿಟಿಷ್ ಸರ್ಕಾರ ಅವರಿಗಾಗಿ ಸರ್ಚ್ ವಾರೆಂಟ್ ಹೊರಡಿಸಿ, ಸೆರೆಹಿಡಿದು ಕಲಘಟಗಿಯಲ್ಲಿ ದಿಗ್ಬಂಧನದಲ್ಲಿ ಇರಿಸಿತು. ಈ ಸಮಯದಲ್ಲಿ ಅವರು ಆಧ್ಯಾತ್ಮದಲ್ಲಿಯೂ ಅಭಿರುಚಿಯನ್ನು ಬೆಳೆಸಿಕೊಂಡರು.

ಆದರೆ, ಆಲೂರರನ್ನು ಕನ್ನಡನಾಡು ನೆನೆಯುವುದು ಅವರ ಕನ್ನಡತಾಯಿಯ ಸೇವೆಗಾಗಿ. 1905ರ ಹೊತ್ತಿಗೆ ಬಿಎ ಮತ್ತು ಎಲ್‌ಎಲ್‌ಬಿ ಪದವಿಗಳನ್ನು ಪಡೆದುಕೊಂಡು ಧಾರವಾಡಕ್ಕೆ ಮರಳಿ ವಕೀಲಿವೃತ್ತಿಯನ್ನು ಪ್ರಾರಂಭಿಸಿದರು. ಆದರೆ ಕನ್ನಡ ಭಾಷೆ ಮತ್ತು ದೇಶದ ಸ್ವಾತಂತ್ರ್ಯದ ತುಡಿತ ಬಲವತ್ತರವಾದಾಗ ವಕೀಲಿವೃತ್ತಿಯನ್ನು ತ್ಯಜಿಸಿದರು. ಇತರರೊಡನೆ ಸೇರಿಕೊಂಡು ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಧಾರವಾಡದಲ್ಲಿ ಸ್ಥಾಪಿಸಿದರು. ಕನ್ನಡದ ಸಮಗ್ರ ಅಭಿವೃದ್ಧಿಗಾಗಿ ತಮ್ಮ ನಂಬುಗೆಯಂತೆ ಕನ್ನಡ ಗ್ರಂಥಕರ್ತರ ಸಮ್ಮೇಳನಗಳನ್ನು ನಡೆಸಿದರು. 1906ರಲ್ಲಿ "ವಾಗ್ಭೂಷಣ" ಮತ್ತು 1922ರಲ್ಲಿ "ಜಯಕರ್ನಾಟಕ" ಪತ್ರಿಕೆಗಳನ್ನು ಪ್ರಾರಂಭಿಸಿದರು. ಜಯಕರ್ನಾಟಕದಲ್ಲಿ ಬೆಟಗೇರಿ ಕೃಷ್ಣಶರ್ಮ ಮತ್ತು ದ ರಾ ಬೇಂದ್ರೆಯಂತಹ ಶ್ರೇಷ್ಠ ಸಾಹಿತಿಗಳು ಸಹಸಂಪಾದಕರಾಗಿದ್ದರು! ಈ ಪತ್ರಿಕೆಯಲ್ಲಿ ಶ್ರೀರಂಗ, ಶಂ ಬಾ ಜೋಶಿ ಮುಂತಾದ ಹೊಸ ಲೇಖಕರ ಬರಹಗಳನ್ನೂ ಪ್ರಕಟಿಸಿದರು. ಆಲೂರರು ಕರ್ಮವೀರ ಮತ್ತು ಕನ್ನಡಿಗ ಪತ್ರಿಕೆಗಳ ಸಂಪಾದಕರಾಗಿಯೂ ಕೆಲಸ ಮಾಡಿದ್ದರು.

ಕರ್ನಾಟಕದ ಏಕೀಕರಣಕ್ಕೆ ಸ್ಫೂರ್ತಿ ತುಂಬಲು ಕರ್ನಾಟಕ ಗತವೈಭವ, ಕರ್ನಾಟಕ ವೀರರತ್ನಗಳು ಮತ್ತು ಕರ್ನಾಟಕತ್ವದ ವಿಕಾಸ ಎಂಬ ಉದ್ಬೋಧಕ ಗ್ರಂಥಗಳನ್ನು ರಚಿಸಿದರು. ಸತತವಾಗಿ ಕರ್ನಾಟಕವನ್ನು ಸುತ್ತಿದರು. ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿಯನ್ನು ಸ್ಥಾಪಿಸಿದರು. ಕನ್ನಡ ಗ್ರಂಥಕರ್ತರ ಮೂರನೆಯ ಸಮ್ಮೇಳನವನ್ನು 1915ರಲ್ಲಿ ಬೆಂಗಳೂರಿನಲ್ಲಿ ಆಯೋಜಿಸಿ, ಅದೇ ಸಮಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಗೆ ಕಾರಣರಾದರು.

ಕರ್ನಾಟಕ ವಿಶ್ವವಿದ್ಯಾನಿಲಯ, ವಿಜಯನಗರ ಮಹೋತ್ಸವ, ನಾಡಹಬ್ಬ ಮುಂತಾದ ಅನೇಕ ಯೋಜನೆಗಳು ಆಲೂರರ ಕಲ್ಪನೆಯ ಮೂಸೆಯಲ್ಲಿ ಮೂಡಿಬಂದವು. 1956ರಲ್ಲಿ ರಾಜ್ಯೋದಯದ ಸಂದರ್ಭದಲ್ಲಿ ಭುವನೇಶ್ವರಿಯ ಉತ್ಸವವನ್ನು ಹಂಪೆಯಲ್ಲಿ ನಡೆಸಿದರು.

1941 ರಲ್ಲಿ ಹೈದರಾಬಾದ್ ಕನ್ನಡಿಗರು ಇವರಿಗೆ ಕರ್ನಾಟಕ ಕುಲಪುರೋಹಿತ ಎಂಬ ಬಿರುದು ನೀಡಿ ಸನ್ಮಾನಿಸಿದರು. 1961ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕೂಡ ಇವರನ್ನು ಸನ್ಮಾನಿಸಿತು. ಕನ್ನಡ ಜನತೆ ಅಭಿಮಾನದಿಂದ ಇವರನ್ನು "ದೇಶ ಸೇವಾ ಧುರೀಣ, ಸ್ವಭಾಷಾ ರಕ್ಷಕ" ಎಂಬ ಬಿರುದುಗಳೊಂದಿಗೆ ಗೌರವಿಸಿದೆ.

ಭಾಷೆ, ಶಿಕ್ಷಣ ಮತ್ತು ಸಂಸ್ಕೃತಿಗಳಿಗೆ ನೀಡಿದಷ್ಟೇ ಮಹತ್ವವನ್ನು ಆಲೂರರು ಆರ್ಥಿಕ ಕ್ಷೇತ್ರಕ್ಕೂ ನೀಡಿದರು. ತಾವೇ ಸ್ಥಾಪಿಸಿದ ಶಿಕ್ಷಣ ಸಂಸ್ಥೆಯಲ್ಲಿ ವೃತ್ತಿಪರ ಶಿಕ್ಷಣವನ್ನು ಪ್ರಾರಂಭಿಸಿದರು. ಇದಕ್ಕೆ ಪೂರಕವಾಗಿ, ಬೆಂಕಿಪೆಟ್ಟಿಗೆ ಕಾರ್ಖಾನೆ, ಉಡುಪು ತಯಾರಿಕೆ ಕಾರ್ಖಾನೆ ಮತ್ತು ಪೆನ್ಸಿಲ್ ತಯಾರಿಕೆ ಕಾರ್ಖಾನೆಗಳನ್ನೂ ಪ್ರಾರಂಭಿಸಿದರು. ಡ್ರಾಯಿಂಗ್, ಚಿತ್ರಕಲೆ ಮತ್ತು ಮುದ್ರಣ ತರಬೇತಿಗಳನ್ನೂ ಪ್ರಾರಂಭಿಸಿದರು. ಬ್ರಿಟಿಷರ ದಬ್ಬಾಳಿಕೆಯಿಂದಾಗಿ ಎಲ್ಲವನ್ನೂ ಮುಚ್ಚಬೇಕಾಗಿ ಬಂದರೂ ಎದೆಗುಂದದೆ ಅವರು ಸಕ್ಕರೆ ಕಾರ್ಖಾನೆ, ಹತ್ತಿಯ ಕಾರ್ಖಾನೆ (ಹೊಳೆ ಆಲೂರಿನಲ್ಲಿ), ಹಂಚಿನ ಕಾರ್ಖಾನೆ (ಬೆಳಗಾವಿಯ ಖಾನಾಪುರದಲ್ಲಿ) ಮುಂತಾದ ಉದ್ಯಮಗಳನ್ನು ಸ್ಥಾಪಿಸಿದರು. ಅಗ್ರಿಕಲ್ಚರಲ್ ಸೊಸೈಟಿ, ಬಟ್ಟೆ ಅಂಗಡಿ, ಪರಸ್ಪರ ಸಹಾಯ ನಿಧಿಗಳನ್ನೂ ಪ್ರಾರಂಭಿಸಿದರು. ಲಾಭೋದ್ದೇಶವನ್ನು ಹೊಂದಿರದ ಇವು ದೇಶದ ಔದ್ಯೋಗಿಕ ಪ್ರಗತಿಗೆ ಪೂರಕ ಚಟುವಟಿಕೆಗಳು ಎಂದು ಅವರು ಭಾವಿಸಿದ್ದರು.

ಆಲೂರರು ಸುಮಾರು 25 ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಲೋಕಮಾನ್ಯ ತಿಲಕರ ಗೀತಾರಹಸ್ಯದ ಕನ್ನಡ ಅನುವಾದ ಪ್ರಮುಖವಾಗಿದೆ. ಶ್ರೀ ವಿದ್ಯಾರಣ್ಯ ಚರಿತ್ರೆ, ಕರ್ನಾಟಕ ಗತವೈಭವ, ಕರ್ನಾಟಕ ವೀರರತ್ನಗಳು, ಶಿಕ್ಷಣ ಮೀಮಾಂಸೆ (ಅನುವಾದ), ರಾಷ್ಟ್ರೀಯತ್ವದ ಮೀಮಾಂಸೆ, ಕನ್ನಡಿಗರ ಭ್ರಮನಿರಸನ (ನಾಟಕ), ಕರ್ನಾಟಕತ್ವದ ವಿಕಾಸ, ಕರ್ನಾಟಕತ್ವದ ಸೂತ್ರಗಳು, ಸ್ವಾತಂತ್ರ್ಯಸಂಗ್ರಾಮ, ಸಂಸಾರ ಸುಖ, ಗೀತಾಪ್ರಕಾಶ, ಗೀತಾಸಂದೇಶ, ಗೀತಾಪರಿಮಳ, ಗೀತಾಭಾವ ಪ್ರದೀಪ, ಶ್ರೀ ಮಧ್ವಾಚಾರ್ಯರ ಮೂಲ ಸಿದ್ಧಾಂತ, ಶ್ರೀ ಮಧ್ವಾಚಾರ್ಯರ ಪೂರ್ಣ ಬ್ರಹ್ಮವಾದ ಅವರು ರಚಿಸಿದ ಇತರ ಗ್ರಂಥಗಳು. "ನನ್ನ ಜೀವನ ಸ್ಮೃತಿಗಳು" ಎಂಬ ಹೆಸರಿನಲ್ಲಿ ಅವರ ಆತ್ಮಕಥನದ ಎರಡು ಭಾಗಗಳು ಪ್ರಕಟವಾಗಿವೆ.

ಭೀಮರಾಯ ಮತ್ತು ಭಾಗೀರಥಿ ದಂಪತಿಗಳ ಮಗನಾಗಿ ಆಲೂರು ವೆಂಕಟರಾಯರು 12/07/1880 ರಲ್ಲಿ ವಿಜಯಪುರದಲ್ಲಿ ಜನಿಸಿದರು. ಪೂರ್ವಜರ ಊರಾದ ಆಲೂರನ್ನು ತಮ್ಮ ಹೆಸರಿನ ಹಿಂದೆ ಸೇರಿಸಿಕೊಂಡು ಕರ್ನಾಟಕದ ಏಕೀಕರಣಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಡುವುದರ ಜೊತೆಗೆ ರಾಷ್ಟ್ರನಿರ್ಮಾಣ ಕಾರ್ಯದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡು ಸಾರ್ಥಕ ಜೀವನ ನಡೆಸಿದರು. ಇವರ ಪ್ರಾರಂಭಿಕ ಶಿಕ್ಷಣ ಧಾರವಾಡದಲ್ಲಿ ಮತ್ತು ಉನ್ನತ ಶಿಕ್ಷಣ ಪುಣೆ ನಗರದಲ್ಲಿ ನಡೆಯಿತು. ಧಾರವಾಡದಲ್ಲಿ ವೃತ್ತಿಜೀವನ ಪ್ರಾರಂಭಿಸಿದರೂ ಪ್ರವೃತ್ತಿಯ ಅಂಗವಾಗಿ ನಾಡಿನಾದ್ಯಂತ ಸುತ್ತಿದರು.

"ನಾಹಂ ಕರ್ತಾ ಹರಃ ಕರ್ತಾ ತತ್ಪೂಜಾ ಕರ್ಮ ಚಾಖಿಲಂ" (ನಾನು ಮಾಡುವವನಲ್ಲ, ಹರನೇ ಮಾಡುವವನು, ನಾವು ಮಾಡುವ ಕೆಲಸವೆಲ್ಲವೂ ಅವನ ಪೂಜಾಕರ್ಮಗಳು) ಎಂಬ ಉಕ್ತಿಗನುಗುಣವಾಗಿ ಬದುಕಿದ ಆಲೂರು ವೆಂಕಟರಾಯರು 25/02/1964 ರಂದು ನಿಧನ ಹೊಂದಿದರು.

"ಇವರಲ್ಲಿ ಬುದ್ಧಿಯ ಏಕಾಗ್ರ ವೃತ್ತಿಗಿಂತ ವ್ಯಾಪಕವೃತ್ತಿಯು ಹೆಚ್ಚು, ಮೂರ್ತಿಪೂಜೆಗಿಂತ ತತ್ವಪೂಜೆಯು ಅಧಿಕ, ಆಚಾರ ನಿಷ್ಠೆಗಿಂತ ವಿಚಾರ ನಿಷ್ಠೆ ಬಹಳ, ರಾಷ್ಟ್ರೀಯ ದೃಷ್ಟಿ ಹೆಚ್ಚು; ರಾಷ್ಟ್ರದರ್ಶನ ಕಡಿಮೆ. ಜನೋದ್ದೀಪನ ಹೆಚ್ಚು, ಜನ ನಿರ್ವಹಣ ಶಕ್ತಿ ಕಡಿಮೆ. ಇವರು ಜನನಾಯಕರಾಗದೆ ಜನನೇತ್ರವಾಗಿದ್ದಾರೆ; ಮುಂದಾಳುಗಳಾಗದೆ ಪ್ರತಿನಿಧಿಗಳಾಗಿದ್ದಾರೆ, ಇವರು ಕರ್ನಾಟಕದ ಪ್ರಾಣೋಪಾಸಕರು" ಎಂದು ಬೇಂದ್ರೆಯವರು ಆಲೂರು ವೆಂಕಟರಾಯರ ಬಗ್ಗೆ ಹೇಳಿದ ಮಾತುಗಳು ಅರ್ಥಪೂರ್ಣವಾಗಿವೆ. ●

-ಕೆ. ಜನಾರ್ದನ ತುಂಗ

# ಅದಮ್ಯಚೇತನ ತಿಂಗಳ ವರದಿ (15 ಅಕ್ಟೋಬರ್ 2022 ರಿಂದ 15 ನವೆಂಬರ್ 2022)

## ಅನಂತ ಸ್ಮೃತಿ ನಡಿಗೆ – ಪಂಜಿನ ಮೆರವಣಿಗೆ




ಅದಮ್ಯ ಚೇತನ, ಅನಂತಕುಮಾರ್ ಪ್ರತಿಷ್ಠಾನ ಮತ್ತು ಅನಂತ ಪ್ರೇರಣಾ ಕೇಂದ್ರಗಳು ಸಂಯುಕ್ತವಾಗಿ ದಿ. ಅನಂತಕುಮಾರರ 4ನೇ ಪುಣ್ಯಸ್ಮರಣೆ ದಿನದ ಅಂಗವಾಗಿ ಆಯೋಜಿಸಿದ "ಅನಂತ ಸ್ಮೃತಿ ನಡಿಗೆ" ಪಂಜಿನ ಮೆರವಣಿಗೆ ಕಾರ್ಯಕ್ರಮದಲ್ಲಿ ನೂರಾರು ಜನರು ಭಾಗವಹಿಸಿದ್ದರು. ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಮಾಜಿ ಮೇಯರ್ ಕಟ್ಟೆ ಸತ್ಯನಾರಾಯಣ, ರಾಜ್ಯ ಬಿಜೆಪಿ ಖಜಾಂಚಿ ಸುಬ್ಬನರಸಿಂಹ, ಶ್ರೀ ಪ್ರಹ್ಲಾದ್ ಬಾಬು, ಆರ್.ಎಸ್.ಎಸ್ ಪ್ರಮುಖ್ ವಿ. ಮಂಜುನಾಥ್, ಶ್ರೀ ಪ್ರದೀಪ್ ಓಕ್, ಶ್ರೀ ನರೇಶ್, ಶ್ರೀ ಗೋವಿಂದ ನಾಯ್ಡು, ಶ್ರೀಮತಿ ಮಮತಾ ಆರ್.ವಿ. ದೇವರಾಜ್, ಶ್ರೀಮತಿ ಸೌಮ್ಯಾ ರೆಡ್ಡಿ, ಮುಂತಾದ ಗಣ್ಯರು ಅನಂತಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಶಿಕ್ಷಣ ತಜ್ಞ ಹಾಗೂ ಬೇಸ್ ಮತ್ತು ಪ್ರಯೋಗ್ ಸಂಸ್ಥೆಗಳ ಸ್ಥಾಪಕರಾದ ಪ್ರೊ. ಎಚ್. ಎಸ್. ನಾಗರಾಜ್ ಮೆರವಣಿಗೆಯನ್ನು ಉದ್ಘಾಟಿಸಿದರು.

ವಾಸವಿ, ಬಿಎಂಎಸ್, ವಿಜಯಾ ಹಾಗೂ ಆರ್.ವಿ. ಕಾಲೇಜುಗಳ ವಿದ್ಯಾರ್ಥಿಗಳೂ ಸೇರಿದಂತೆ ಸುಮಾರು 800ಕ್ಕೂ ಹೆಚ್ಚು ಸಾರ್ವಜನಿಕರು, ಅನಂತಕುಮಾರ್ ಅಭಿಮಾನಿಗಳು ಮತ್ತು ಸಹವರ್ತಿಗಳು ಅನಂತ ಪ್ರೇರಣಾ ಕೇಂದ್ರದಿಂದ ಹೊರಟು ರಾ. ವಿ, ರಸ್ತೆ, ಅನಂತ ಸ್ಮೃತಿ ವನ, ವಾಣಿವಿಲಾಸ್ ರಸ್ತೆ, ಡಿವಿಜಿ ರಸ್ತೆ, ನಾಗಸಂದ್ರ ವೃತ್ತ, ಸೌತ್ ಎಂಡ್ ರಸ್ತೆ ಮಾರ್ಗವಾಗಿ ಸಾಗಿ ಮಾರ್ಗ ಮಧ್ಯದಲ್ಲಿ ಕುವೆಂಪು, ಡಿವಿಜಿ, ಎಚ್ಚೆನ್, ಸರ್ ಎಂ ವಿಶ್ವೇಶ್ವರಯ್ಯ, ಬಿ ಎಂ ಶ್ರೀ, ಡಾ. ರಾಜಕುಮಾರ್ ಮುಂತಾದ ದಿಗ್ಗಜರ ಪ್ರತಿಮೆಗಳಿಗೆ ಗೌರವಾರ್ಪಣೆ ಮಾಡಿದರು. ಅನಂತ ಪ್ರೇರಣಾ ಕೇಂದ್ರದಲ್ಲಿಯೇ ಕೊನೆಗೊಂಡ ಮೆರವಣಿಗೆಯ ವ್ಯವಸ್ಥೆಯನ್ನು ಶ್ರೀ ರಾಜಾರಾಮ್ ಭಟ್, ಶ್ರೀಮತಿ ಮೀನಾ ಶಾಸ್ತ್ರಿ, ಬಸವರಾಜು ದಂಪತಿಗಳು ಮುಂತಾದವರು ನಿರ್ವಹಿಸಿದ್ದರು.

### ರಾಷ್ಟ್ರೀಯ ಆಯುರ್ವೇದ ದಿನ

ರಾಷ್ಟ್ರೀಯ ಆಯುರ್ವೇದ ದಿನದ ಅಂಗವಾಗಿ ಅ.19ರಂದು ಅದಮ್ಯ ಚೇತನದ ಸಂಸ್ಥೆಯಲ್ಲಿ 'ಪ್ರತಿ ದಿನ ಪ್ರತಿ ಮನೆಯಲ್ಲಿ ಆಯುರ್ವೇದ' ಎಂಬ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಬೆಂಗಳೂರಿನ ಕೇಂದ್ರೀಯ ಆಯುರ್ವೇದ ಸಂಶೋಧನಾ ಸಂಸ್ಥೆಯ ಪ್ರಭಾರಿ ಸಹಾಯಕ ನಿರ್ದೇಶಕರಾದ ಡಾ. ಸುಲೋಚನಾ ಭಟ್, ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಆಯುರ್ವೇದ ಸಂಸ್ಥೆಯ ಸಂಶೋಧಕರಾದ ಡಾ. ತೇಜಸ್ವಿನಿ ಎಚ್.ಎಸ್. ನಾಗರಾಜ್ ಹಾಗೂ ವಿವಿಧ ಶಾಲೆಗಳಿಂದ ಆಗಮಿಸಿದ ಶಿಕ್ಷಕರು ಭಾಗವಹಿಸಿದ್ದರು.

### ಹಸಿರು ಭಾನುವಾರ

ರೋಟರಿ ಮಿಡ್‌ಟೌನ್ ಕ್ಲಬ್ ಪ್ರಾಯೋಜಕತ್ವದಲ್ಲಿ 355ನೇ ಹಸಿರು ಭಾನುವಾರ ಕಾರ್ಯಕ್ರಮವು ಜ್ಞಾನಭಾರತಿ ಆವರಣದಲ್ಲಿ ನಡೆಯಿತು. ರೋಟರಿ ಮಿಡ್‌ಟೌನ್ ಕ್ಲಬ್ಬಿನ ಅಧ್ಯಕ್ಷರಾದ ಶ್ರೀ ನದೀಮ್ ಅಹಮದ್ ಮತ್ತು ಅನಂತಕುಮಾರರ ದೀರ್ಘಕಾಲದ ಸಹವರ್ತಿಯಾಗಿದ್ದ ಶ್ರೀ ಭಾಸ್ಕರ್ ಈ ಬೃಹತ್ ಕಾರ್ಯಕ್ರಮದ ಹಿಂದಿನ ಶಕ್ತಿಯಾಗಿದ್ದರು. ರೋಟರಿ ಮಿಡ್‌ಟೌನ್ ಮತ್ತು ರೋಟರಾಕ್ಟ್ ಕ್ಲಬ್ ಗಿಡಗಳನ್ನು ನೆಡಲು ಮತ್ತು ಅವುಗಳನ್ನು ಮುಂದಿನ ಒಂದು ವರ್ಷದ ವರೆಗೆ ಸಂರಕ್ಷಿಸಲು ಧನಸಹಾಯ ಮಾಡಿವೆ. ಜೊತೆಗೆ ಎರಡೂ ಸಂಸ್ಥೆಗಳ ಸದಸ್ಯರು ಉತ್ಸಾಹದಿಂದ ಭಾಗವಹಿಸಿದ್ದರು.

356, 357, 358 ಮತ್ತು 359ರ ಹಸಿರು ಭಾನುವಾರ ಕಾರ್ಯಕ್ರಮಗಳನ್ನು ಬಂಡೆ ಮಹಾಕಾಳಮ್ಮ ದೇವಸ್ಥಾನದ ಆವರಣದಲ್ಲಿ, ಬೆಂಗಳೂರು ವಿಶ್ವವಿದ್ಯಾಲಯ ಎನ್‌ಎಸ್‌ಎಸ್ ಭವನದ ಬಯೋ ಪಾರ್ಕ್‌ನಲ್ಲಿ ಹಾಗೂ ಬಸವನಗುಡಿಯ ಬಿ.ಪಿ. ವಾಡಿಯಾ ರಸ್ತೆಯಲ್ಲಿರುವ ಅನಂತವನದಲ್ಲಿ ನಡೆಸಲಾಯಿತು.

### ಕೋಟಿ ಕಂಠ ಗಾಯನ ಅಭಿಯಾನ

ಅದಮ್ಯ ಚೇತನ ಸಂಸ್ಥೆಯು 67ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಅಕ್ಟೋಬರ್ 28ರಂದು ಆಯೋಜಿಸಲಾಗಿರುವ 'ಕೋಟಿ ಕಂಠ ಗಾಯನ – ನನ್ನ ನಾಡು ನನ್ನ ಹಾಡು' ಅಭಿಯಾನದಲ್ಲಿ ಪಾಲ್ಗೊಂಡು ಬೆಳಿಗ್ಗೆ 11 ಗಂಟೆಗೆ ಸಾಮೂಹಿಕ ಗಾಯನ ಕಾರ್ಯಕ್ರಮವನ್ನು ಆಯೋಜಿಸಿತ್ತು.

ಈ ಕಾರ್ಯಕ್ರಮದಲ್ಲಿ ಮಾತನಾಡಿದ ತೇಜಸ್ವಿನಿಯವರು, ಅನಂತಕುಮಾರರು ವಿಶ್ವಸಂಸ್ಥೆಯಲ್ಲಿ ಕನ್ನಡದಲ್ಲಿಯೇ ಮಾತನಾಡುವುದರ ಮೂಲಕ ಕನ್ನಡ ಭಾಷೆಯ ಗೌರವವನ್ನು ಹೆಚ್ಚಿಸಿದ್ದರು. ಕನ್ನಡಪರ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದ ಅವರು ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಕೊಡಿಸಲೂ ಅಪಾರ ಶ್ರಮ ವಹಿಸಿದ್ದರು. ಅವರು ಕನ್ನಡದಲ್ಲಿಯೇ ಸಹಿ ಮಾಡುತ್ತಿದ್ದರು ಎಂದು ತಿಳಿಸಿದರು. ಕನ್ನಡದ ಅಭಿಮಾನವನ್ನು ಬೆಳೆಸಲು ವಿಭಿನ್ನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಮಾನ್ಯ ಮುಖ್ಯಮಂತ್ರಿಗಳಾದ ಬಸವರಾಜ್ ಬೊಮ್ಮಾಯಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ವಿ. ಸುನಿಲ್ ಕುಮಾರ್ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ●

ಧೀಮಂತ ರಾಜಕಾರಣಿ, ಜನಾನುರಾಗಿ ಹಾಗೂ ಮಾಜಿ ಕೇಂದ್ರ ಸಚಿವರಾಗಿದ್ದ ದಿ. ಅನಂತ್ ಕುಮಾರ್ ಅವರ ಸ್ಮೃತಿದಿನದಂದು ನನ್ನ ಅನಂತ ನಮನಗಳು.

- **ಶ್ರೀ ಡಿ. ವಿ. ಸದಾನಂದ ಗೌಡ**, ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವರು

ಪಕ್ಷ ಸಂಘಟನೆಗೆ ಅಪಾರ ಕೊಡುಗೆ ನೀಡಿದ್ದ ಹಿರಿಯ ನಾಯಕ, ಸಂಸದರಾಗಿ, ಕೇಂದ್ರ ಸಚಿವರಾಗಿ ರಾಜ್ಯದ ಅಭಿವೃದ್ಧಿಗಾಗಿ ನಿರಂತರ ಶ್ರಮಿಸಿದ್ದ ಮುತ್ಸದ್ದಿ, ಆತ್ಮೀಯ ಸ್ನೇಹಿತ ಶ್ರೀ ಅನಂತಕುಮಾರ್ ಅವರ ಪುಣ್ಯತಿಥಿಯಂದು ಅವರಿಗೆ ಭಾವಪೂರ್ಣ ನಮನಗಳು.

- **ಶ್ರೀ ಬಿ.ಎಸ್. ಯಡಿಯೂರಪ್ಪ**, ಮಾಜಿ ಮುಖ್ಯಮಂತ್ರಿಗಳು

ನಮ್ಮ ಭಾರತೀಯ ಜನತಾ ಪಕ್ಷವನ್ನು ರಾಜ್ಯಾದ್ಯಂತ ಸಂಘಟಿಸಿದ ಮುಂಚೂಣಿ ನಾಯಕರಲ್ಲಿ ಒಬ್ಬರಾದ ಶ್ರೀ ಅನಂತ್ ಕುಮಾರ್ ಅವರ ಪುಣ್ಯಸ್ಮರಣೆ ಇಂದು. ರಾಜಕಾರಣದಲ್ಲಿ ನಮಗೆಲ್ಲರಿಗೂ ಮಾರ್ಗದರ್ಶಕರಂತಿದ್ದ ಅವರ ನೆನಪು ಸದಾ ಅಮರ.

- **ಎಂ. ಕೃಷ್ಣಪ್ಪ, ಶಾಸಕರು** (ಬೆಂಗಳೂರು ದಕ್ಷಿಣ)

ಭಾರತೀಯ ಜನತಾ ಪಕ್ಷದ ಹಿರಿಯ ನಾಯಕರು, ಕರ್ನಾಟಕ ಮತ್ತು ಕೇಂದ್ರ ಸರಕಾರದ ಕೊಂಡಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಮಾಜಿ ಕೇಂದ್ರ ಸಚಿವರು, ನನ್ನ ಆತ್ಮೀಯರು ಹಾಗೂ ಮಾರ್ಗದರ್ಶಕರು ದಿ.ಶ್ರೀ ಅನಂತ್ ಕುಮಾರ್ ಅವರ ಪುಣ್ಯಸ್ಮರಣೆಯ ಗೌರವದ ನಮನಗಳು.

- **ಕೇಂದ್ರ ಸಚಿವ ಶ್ರೀ ಪ್ರಲ್ಹಾದ ಜೋಶಿ**

# ಅದಮ್ಯ ಸೇವಾ

**( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )**




ಅದಮ್ಯ ಚೇತನ ಕಚೇರಿಯ ಆವರಣದಲ್ಲಿ ನಡೆದ ೬೭ ನೇ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಭುವನೇಶ್ವರಿ ದೇವಿಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಧ್ವಜಾರೋಹಣ ಮಾಡಿದರು.




ಸನಾತನ ಹಿಂದೂ ಸಮಾಜ ಪರಿಷತ್ ಆಯೋಜಿಸಿದ್ದ ಸಮಾನ ಸಂಸ್ಕಾರ ಸಮಾವೇಶ -ಸಂಸ್ಕಾರ ಹಬ್ಬದಲ್ಲಿ ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಭಾಗಿಯಾಗಿದ್ದರು.




ಕೋಟಿ ಕಂಠ ಗಾಯನ - ನನ್ನ ನಾಡು ನನ್ನ ಹಾಡು ಅಭಿಯಾನದಲ್ಲಿ ಪಾಲ್ಗೊಂಡ ಸ್ವಯಂ ಸೇವಕರ, ಕಾರ್ಯಕರ್ತರ, ಸಿಬ್ಬಂದಿ ವರ್ಗದ ಸಾಮೂಹಿಕ ಚಿತ್ರ.

ವೀರ ವನಿತೆ ಒನಕೆ ಓಬವ್ವ ಕನ್ನಡ ಸೇವಾ ಸಮಿತಿಯು 67ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಜಯನಗರದಲ್ಲಿ ಆಯೋಜಿಸಿದ ಹಿರಿಯ ನಾಗರಿಕರ ಕ್ರೀಡಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅದಮ್ಯ ಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಭಾಗವಹಿಸಿದರು.






358ನೇ ಹಸಿರು ಭಾನುವಾರ ಕಾರ್ಯಕ್ರಮವು ಬಸವನಗುಡಿಯ ಬಿಪಿ ವಾಡಿಯಾ ರಸ್ತೆಯಲ್ಲಿರುವ ಅನಂತವನದಲ್ಲಿ ನಡೆಯಿತು.




ಅದಮ್ಯ ಚೇತನದ ಕಚೇರಿಯಲ್ಲಿ ನಡೆದ ಭಗದ್ಗೀತೆ ಶ್ಲೋಕ ಪಠಣ ಕಾರ್ಯಕ್ರಮ

## ಅನಂತ ಚಿತ್ರಸಂಪುಟ

**ನಾಡು, ನುಡಿ, ಭಾಷೆ, ಕನ್ನಡ ಸಂಸ್ಕೃತಿಗಳ ಕುರಿತು ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ ಬಂದರೆ ಅನಂತಕುಮಾರ್ ಅವರು ತಪ್ಪಿಸಿ ಕೊಳ್ಳುತ್ತಿರಲಿಲ್ಲ. ಎಷ್ಟೇ ತುರ್ತು ಇದ್ದರೂ ಅರ್ಧ ಗಂಟೆಯಾದರೂ ಭಾಗವಹಿಸುತ್ತಿದ್ದರು. ಇದು ನಮ್ಮ ನಾಡು, ನುಡಿ, ಪರಂಪರೆಗಳ ಕುರಿತು ಅನಂತಕುಮಾರ್ ಅವರಿಗೆ ಇದ್ದ ಅನನ್ಯ ಕಾಳಜಿ ಹಾಗೂ ಗೌರವದ ಸಂಕೇತ.**













ಅನಂತಪಥ

Editorial Advisory Committee: **Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Trivikram Joshi / Madhumathi Kumbaluru**
Inputs: **Poornaprajna / Srikanth K / Veena Vittal**
Photographs: **Venkatesh Murthy / Gopal TS / Chakrapani Kengeri / Internet Sources**
Acknowledgements: **Raghavendra Prasad / Krishna Sampagaonkar / Chaya Bapat**
Sketch: **Rashmi Killedar** Printed at: **Rashtrothana Mudranalaya, Chamrajpet, Bengaluru**
Published by: **Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415